ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜುಲೈ 18, 2024

ಸಂಪುಟ : 51 ಸಂಚಿಕೆ : 65 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಮೀಸಲಾತಿ ಕೊಟ್ಟರೆ ಕಂಪನಿಗಳೇ ಹೊರಕ್ಕೆ : ನ್ಯಾಸ್ಕಾಂ ಎಚ್ಚರಿಕೆ

ನವದೆಹಲಿ, ಜು. 17 - ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸುವ ಕರ್ನಾಟಕ ಸರ್ಕಾರದ ಕ್ರಮ ನಿರಾಶದಾಯಕ. ಇದರಿಂದ ಕಂಪನಿಗಳು ರಾಜ್ಯದಿಂದ ಹೊರ ನಡೆಯಲಿವೆ ಎಂದು ಐ.ಟಿ. ಕಂಪನಿಗಳ ಒಕ್ಕೂಟವಾದ ನ್ಯಾಸ್ಕಾಂ ಎಚ್ಚರಿಸಿದೆ.

ರಾಜ್ಯ ಸರ್ಕಾರದ ಮೀಸಲಾತಿ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ನ್ಯಾಸ್ಕಾಂ, ಸರ್ಕಾರ ಮಸೂದೆ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದೆ. ಅಲ್ಲದೆ ಇಂತಹ ಕ್ರಮದಿಂದ ರಾಜ್ಯ ತಂತ್ರಜ್ಞಾನ ವಲಯದಲ್ಲಿ ಮಾಡಿರುವ ಸಾಧನೆಗೆ ಹಿನ್ನಡೆಯಾಗಲಿದೆ ಎಂದು ಎಚ್ಚರಿಸಲಾಗಿದೆ. ರಾಜ್ಯ ಐ.ಟಿ. ವಲಯದಲ್ಲಿ ಸಾಧಿಸಿರುವ ಮುನ್ನಡೆ ಹಳಿ ತಪ್ಪುವುದನ್ನು ತಡೆಯಲು ಶೀಘ್ರದಲ್ಲೇ ಭೇಟಿಗಾಗಿ ಅವಕಾಶ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದೆ.

ಮಸೂದೆಯಲ್ಲಿನ ಅಂಶಗಳ ಬಗ್ಗೆ ನ್ಯಾಸ್ಕಾಂ ಸದಸ್ಯರಿಗೆ ತೀವ್ರ ಆಕ್ಷೇಪ ಇದೆ. (4ನೇ ಪುಟಕ್ಕೆ)

# ಕನ್ನಡಿಗರ ಮೀಸಲಾತಿ ವಿಧೇಯಕಕ್ಕೆ ತಡೆ

## ಔದ್ಯಮಿಕ ವಲಯದಿಂದ ತೀವ್ರ ವಿರೋಧದ ನಂತರ ಉಲ್ಟಾ ಹೊಡೆದ ಸರ್ಕಾರ

ಬೆಂಗಳೂರು, ಜು. 17 - ಕರ್ನಾಟಕದ ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಸಂಬಂಧ ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ್ದ ವಿಧೇಯಕಕ್ಕೆ ತಾತ್ಕಾಲಿಕ ತಡೆ ನೀಡಲಾಗಿದೆ.

ಸೋಮವಾರ ಸಂಪುಟ ಸಭೆಯಲ್ಲಿ ವಿಧೇಯಕಕ್ಕೆ ಅನುಮೋದನೆ ನೀಡಲಾಗಿತ್ತು. ಆದರೆ, ಔದ್ಯಮಿಕ ವಲಯ ಹಾಗೂ ಟೆಕ್ ವಲಯದಿಂದ ತೀವ್ರ ಆಕ್ಷೇಪ ಕೇಳಿ ಬಂದ ನಂತರ ಸರ್ಕಾರ ಉಲ್ಟಾ ಹೊಡೆದಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮ ಕಚೇರಿ ಮಾಹಿತಿ ನೀಡಿದ್ದು, ಕನ್ನಡಿಗರಿಗೆ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಉದ್ದಿಮೆಗಳಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಸಂಪುಟ ಅನುಮೋದನೆ ನೀಡಲಾಗಿದ್ದ ವಿಧೇಯಕವನ್ನು ತಾತ್ಕಾಲಿಕವಾಗಿ ತಡೆಹಿಡಿಯ ಲಾಗಿದೆ ಎಂದು ತಿಳಿಸಿದೆ.

ಸದ್ಯ ಮೀಸಲಾತಿ ವಿಧೇಯಕವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ. ಮುಂದಿನ ದಿನಗಳಲ್ಲಿ (4ನೇ ಪುಟಕ್ಕೆ)

### ಮೊದಲು ಡಿಲೀಟ್, ನಂತರ ತಡೆ

ಬೆಂಗಳೂರು, ಜು. 17 - ಖಾಸಗಿ ವಲಯದ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇಕಡ ನೂರರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ಟ್ವಿಟ್ಟರ್‌ನಲ್ಲಿ ನೀಡಿದ್ದ ಹೇಳಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಡಿಲೀಟ್ ಮಾಡಿದ್ದರು. ನಂತರದಲ್ಲಿ ಮೀಸಲಾತಿ ವಿಧೇಯಕವನ್ನೇ ತಡೆಯಲು ನಿರ್ಧರಿಸಿದ್ದಾರೆ. (4ನೇ ಪುಟಕ್ಕೆ)

## ವಾಲ್ಮೀಕಿ ನಿಗಮ ಹಗರಣ ನಾಗೇಂದ್ರ ಪತ್ನಿ ಇಡಿ ವಶಕ್ಕೆ

**ನಾಗೇಂದ್ರ ಪತ್ನಿ ಖಾತೆಯಿಂದಲೂ ಹೆಚ್ಚು ಮೊತ್ತದ ಹಣ ವರ್ಗಾವಣೆ ಹಿನ್ನೆಲೆ**

ಬೆಂಗಳೂರು, ಜು. 17 - ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಮಾಜಿ ಸಚಿವ, ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ ಅವರ ಪತ್ನಿ ಮಂಜುಳಾ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಡಾಲರ್ಸ್ ಕಾಲೋನಿಯ ನಿವಾಸದಿಂದ ಇ.ಡಿ. ಅಧಿಕಾರಿಗ ಳು ವಶಕ್ಕೆ ಪಡೆದ ನಂತರ (2ನೇ ಪುಟಕ್ಕೆ)

## ಓಮನ್‌ನಲ್ಲಿ ಭಾರತೀಯರ 13 ಟ್ಯಾಂಕರ್ ಮುಳುಗಡೆ

ದುಬೈ, ಜು. 17 - ಕೊಲೊಂಬೊ ಧ್ವಜ ಹೊಂದಿದ್ದ ತೈಲ ಟ್ಯಾಂಕರ್ ಒಂದು ಓಮನ್ ಕರಾವಳಿಯ ಬಳಿ ಮುಳುಗಿದೆ. ಇದರಲ್ಲಿ 13 ಭಾರತೀಯರೂ ಸೇರಿದಂತೆ, 16 ಸಿಬ್ಬಂದಿ ಇದ್ದರು.

ಪ್ರಿಸ್ಟೀಜ್ ಫ್ಯಾಲ್ಕನ್ ಹೆಸರಿನ ಹಡಗಿನಲ್ಲಿ 13 ಭಾರತೀಯರು ಹಾಗೂ ಮೂವರು ಶ್ರೀಲಂಕಾದ ಸಿಬ್ಬಂದಿ ಇದ್ದರು. ಈ ಹಡಗು ಯೆಮೆನ್‌ನ ಬಂದರು ನಗರ ಏಡನ್‌ಗೆ ತೆರಳುತ್ತಿತ್ತು.

## ಪದವೀಧರರಿಗೆ 10 ಸಾವಿರ ರೂ.

**ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ**

ಪುಣೆ, ಜು. 17 - ಲಡ್ಕ ಬಾವು ಯೋಜನೆ ಮೂಲಕ ನಿರುದ್ಯೋಗಿಗಳಿಗೆ ಹತ್ತು ಸಾವಿರ ರೂ.ಗಳ ವರೆಗಿನ ಶಿಷ್ಯ ವೇತನ ಹಾಗೂ ಉದ್ಯೋಗ ತರಬೇತಿ ನೀಡುವುದಾಗಿ ಮಹಾರಾಷ್ಟ್ರದ ಮುಖ್ಯ ಮಂತ್ರಿ ಏಕನಾಥ ಶಿಂಧೆ ತಿಳಿಸಿದ್ದಾರೆ.

ಸಭೆಯೊಂದರಲ್ಲಿ ಮಾತನಾಡಿದ ಅವರು, ಮಹಿಳೆಯರಿಗಾಗಿ ಹಣಕಾಸು ನೆರವಿನ ಯೋಜನೆ ಲಡ್ಕಿ ಬಹಿನ್ ರೂಪಿಸಲಾಗಿತ್ತು. ಈಗ ಪುರುಷರಿಗಾಗಿ ಲಡ್ಕ ಬಾವು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.


ಈ ಯೋಜನೆಯ ಅನ್ವಯ ಕೈಗಾರಿಕೆಗಳಲ್ಲಿ ತರಬೇತಿ ಹಾಗೂ ಶಿಷ್ಯ ವೇತನ ನೀಡಲಾಗುವುದು. 12ನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ 6,000 ರೂ, ಡಿಪ್ಲೋಮಾ (4ನೇ ಪುಟಕ್ಕೆ)

## ಅಗ್ನಿವೀರರಿಗೆ ಶೇ.10ರ ಮೀಸಲಾತಿ

ಚಂಡೀಘಡ, ಜು. 14 - ಪೊಲೀಸ್ ಪೇದೆ, ಅರಣ್ಯ ಭದ್ರತಾ ದಳ ಹಾಗೂ ಜೈಲು ವಾರ್ಡನ್ ಹುದ್ದೆಗಳಲ್ಲಿ ಅಗ್ನಿವೀರರಿಗೆ ಶೇಕಡ 10ರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ಹರಿಯಾಣ ಸರ್ಕಾರ ಪ್ರಕಟಿಸಿದೆ. ರಾಜ್ಯ ವಿಧಾನಸಭಾ ಚುನಾವಣೆ ಸಮೀಪದಲ್ಲಿರುವಾಗಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಈ ಬಗ್ಗೆ ಮಾತನಾಡಿರುವ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಬಿ ಮತ್ತು ಸಿ ಶ್ರೇಣಿಯ ಹುದ್ದೆಗಳಲ್ಲಿ ಅಗ್ನಿವೀರರಿಗೆ ವಯೋಮಿತಿಯಲ್ಲಿ 3 ವರ್ಷಗಳ ವಿನಾಯಿತಿ ನೀಡಲಾಗುವುದು. ಮೊದಲ ತಂಡದ ಅಗ್ನಿವೀರರಿಗೆ ಐದು ವರ್ಷಗಳ ವಿನಾಯಿತಿ ಇರಲಿದೆ ಎಂದು ತಿಳಿಸಿದರು. ಸಿ ಶ್ರೇಣಿಯ ನಾಗರಿಕ ಹುದ್ದೆಗಳಲ್ಲಿ ಶೇ. 5 ಮತ್ತು ಬಿ ಶ್ರೇಣಿಯ ಹುದ್ದೆಗಳಲ್ಲಿ ಶೇ. (4ನೇ ಪುಟಕ್ಕೆ)

### ಅಲ್ಹಾಜ್ ಕೆ. ಮೊಹಮ್ಮದ ಯಾಕೂಬ್ ಸಾಬ್ ನಿಧನ



ಎಂ.ಸಿ.ಸಿ. ಬಿ ಬ್ಲಾಕ್, ಸ್ವಿಮ್ಮಿಂಗ್ ಪೂಲ್ ಹತ್ತಿರ, ದಾವಣಗೆರೆ. ವಾಸಿಯಾದ

**ಅಲ್ಹಾಜ್ ಕೆ. ಮೊಹಮ್ಮದ್ ಯಾಕೂಬ್ ಸಾಬ್**

Rtd Chief Engineer

(97ವರ್ಷ) ಇವರು ದಿನಾಂಕ : 17.07.2024ರ ಬೆಳಿಗ್ಗೆ 3.00 ಗಂಟೆಗೆ ದೈವಾಧೀನರಾಗಿರುತ್ತಾರೆ. 4 ಜನ ಗಂಡು ಮಕ್ಕಳು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 18.07.2024ರ ಗುರುವಾರ ಬೆಳಿಗ್ಗೆ 9.00 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗದವರು :**

**ಸಂತೇಬೆನ್ನೂರು ಖಾಜಿ ಟ್ರಸ್ಟ್ ವಂಶಸ್ಥರು**

ಫೋನ್ : 99861 24734, 08192 222621

|| ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ || || ಶ್ರೀ ಕಾಶೀಲಿಂಗೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ಮ.ನಿ.ಪ್ರ.ಶ್ರೀ ಮಹಾಂತರುದ್ರೇಶ್ವರ ಮಹಾಸ್ವಾಮಿಗಳು,
ವಿರಕ್ತಮಠ, ಹೆಬ್ಬಾಳು
ಇವರ ಕೃಪಾಶೀರ್ವಾದದೊಂದಿಗೆ
ದಾವಣಗೆರೆ ತಾ.ಜಿ.ಕಾಶೀಪುರ
ಗ್ರಾಮದ ವಾಸಿ
ಸಣ್ಣ ನಂಜಪ್ಪ ಶ್ರೀಮತಿ ಗೌರಮ್ಮ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ 10.07.2024ರ
ಬುಧವಾರ ಮಧ್ಯಾಹ್ನ 3.15ಕ್ಕೆ
ನನ್ನ ಪೂಜ್ಯ ಪತಿಯವರಾದ

**ಶ್ರೀ ಸಣ್ಣನಂಜಪ್ಪ ಗೌಡ್ರು ವಿಶ್ವನಾಥಪ್ಪ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 18.07.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಕಾಶೀಪುರದ ಮೃತರ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

- ✦ ಸಣ್ಣ ನಂಜಪ್ಪ ಗೌಡ್ರ ಶ್ರೀಮತಿ ಗೌರಮ್ಮ
- ✦ ಮಗಳು: ಶ್ರೀಮತಿ ಶ್ರೀ ವಜ್ರ ಹಾಲೇಶ್ ಮತ್ತು ಮಕ್ಕಳು, ದಾವಣಗೆರೆ.
- ✦ ಶ್ರೀಮತಿ ಶ್ರೀ ಪುಷ್ಪಾ ಮಹೇಶ್ ಮತ್ತು ಮಕ್ಕಳು, ದಾವಣಗೆರೆ.
- ✦ ಶ್ರೀಮತಿ ಶ್ರೀ ಜಗದೀಶ್ ಕೆ.ಎಸ್. ಸ್ವಾತಿ ಮತ್ತು ಮಕ್ಕಳು, ಕಾಶೀಪುರ.
- ✦ ಶ್ರೀಮತಿ ಶ್ರೀ ರವಿ ಕೆ.ಎಸ್. ಮಮತ ಮತ್ತು ಮಕ್ಕಳು, ಕಾಶೀಪುರ.
- ✦ ಹಾಗೂ ಗೌಡ್ರ ಸಣ್ಣ ನಂಜಪ್ಪ ವಂಶಸ್ಥರು ಮತ್ತು ಬಂಧು ಮಿತ್ರರು.

## ಬಂಜಾರ ಸಮುದಾಯದಿಂದ ಸಂಭ್ರಮದ ಸೀತ್ಲಾ ಹಬ್ಬ

ಹರಪನಹಳ್ಳಿ, ಜು. 17 - ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮಣ್ಣೆತ್ತಿನ ಅಮಾವಾಸ್ಯೆಯ ನಂತರ ತಾಲ್ಲೂಕಿನ ವಿವಿಧ ತಾಂಡಾಗಳಲ್ಲಿ ಸೀತ್ಲಾ ಹಬ್ಬವನ್ನು ಸಂಭ್ರಮದಿಂದ ಆಚರಿಸಿದ ಬಳಿಕ ಹರಪನಹಳ್ಳಿ ಪಟ್ಟಣದಲ್ಲಿರುವ ಬಂಜಾರ್ ಸಮುದಾಯದ ಮುಖಂಡರ ನೇತೃತ್ವದಲ್ಲಿ ಸೀತ್ಲಾ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ಪೊಲೀಸ್ ಲೈನ್ ಹಿಂಭಾಗದಲ್ಲಿರುವ ಸಂತ ಶ್ರೀ ಸೇವಾಲಾಲ್ ಮಹಾರಾಜರ ಮತ್ತು ಮಾತೆ ಶ್ರೀ ಮರಿಯಮ್ಮ ದೇವಿ ದೇವಸ್ಥಾನದ ಹತ್ತಿರ ಇರುವ ಸಾತೂ ಯಾಡಿ ದೇವರ ಹತ್ತಿರ ಪಟ್ಟಣದ ಬಂಜಾರ್ ಸಮುದಾಯದ ಎಲ್ಲಾ ಮುಖಂಡರು ಸೇರಿ ಸಂಪ್ರದಾಯದಂತೆ ಸೀತ್ಲಾ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಮಾರಕ ರೋಗ-ರುಜಿನಗಳು ದೂರಾಗಲಿ, ಧನ-ಧಾನ್ಯ ಸಮೃದ್ಧಿಯಾಗಿ ಬೆಳೆದು ಸುಖ, ಶಾಂತಿ, ನೆಮ್ಮದಿಯ ಬದುಕು ನಮ್ಮದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಬೇವಿನಮರದ ಬುಡದಲ್ಲಿ ಏಳು ಮಾತೆಯರನ್ನು ಪ್ರತಿಬಿಂಬಿಸುವ ಮರದ ಏಳು ಕೊಂಬೆಯ ತುಂಡುಗಳನ್ನು ಇಲ್ಲವೇ, ಏಳು ಕಲ್ಲುಗಳಿಗೆ ಊರ್‌ಮಂಜು ಬಣ್ಣ ಲೇಪಿಸಿ, ಕುಂಕುಮಾರ್ಚನೆ ಮಾಡುವುದು ಪದ್ಧತಿ, ಮಾತೆಯರ ಪ್ರತಿಬಿಂಬದ ಹಿಂದೆ ಲೂಕಡ್ (ಸೇವಕ) ನನ್ನು ಪ್ರತಿಷ್ಠಾಪಿಸುತ್ತಾರೆ. ಬಳಿಕ ಕುರಿ, ಕೋಳಿ, ಹರಕೆ ಹೊತ್ತ ಭಕ್ತರು ಲೂಕಡ್‌ಗೆ ರಕ್ತಾಭಿಷೇಕ (2ನೇ ಪುಟಕ್ಕೆ)


### ಬೆನ್ನೂರು ಚಂದ್ರಪ್ಪ ನಿಧನ

ದಾವಣಗೆರೆ ವಿದ್ಯಾನಗರ, 18ನೇ ಕ್ರಾಸ್,
ಕೊನೆ ಬಸ್ ನಿಲ್ದಾಣ ಹತ್ತಿರದ ವಾಸಿ

**ಶ್ರೀಯುತ ಬೆನ್ನೂರು ಚಂದ್ರಪ್ಪ**

(ದಾವಣಗೆರೆ ಜಿಲ್ಲೆಯ ಜನಪ್ರಿಯ ಜವಳಿ ವ್ಯಾಪಾರಿಗಳಾದ ರವಿತೇಜ ಟೆಕ್ಸ್‌ಟೈಲ್ಸ್ ಮಾಲೀಕರು) ಅವರು ದಿನಾಂಕ 17-07-2024ರ ಬುಧವಾರ ರಾತ್ರಿ 11-48ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಮಕ್ಕಳಾದ ಮಲ್ಲಿಕಾರ್ಜುನ ಬೆನ್ನೂರು, ರುದ್ರೇಶ್ ಬೆನ್ನೂರು, ನಾಗರಾಜ್ ಬೆನ್ನೂರು, ವೀರಣ್ಣ ಬೆನ್ನೂರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18-07-2024ರ ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.



ದುಃಖತಪ್ತ ಕುಟುಂಬ ವರ್ಗ
ಬೆನ್ನೂರು ಕುಟುಂಬದವರು ಮತ್ತು ತೆಲಿಗಿ ಬಂಧುಗಳು
ರವಿತೇಜ ಟೆಕ್ಸ್‌ಟೈಲ್ಸ್ – ರವಿತೇಜ ಗ್ರೂಪ್ಸ್
ಸಿಬ್ಬಂದಿ ವರ್ಗದವರು



## ಹರಪನಹಳ್ಳಿ : ಮೊಹರಂ ಹಬ್ಬ ಸಂಭ್ರಮದಿಂದ ಆಚರಣೆ



ಹರಪನಹಳ್ಳಿ, ಜು.17 - ಮುಸ್ಲಿಂ ಸಮುದಾಯದಲ್ಲಿ ಹೆಚ್ಚು ಪ್ರಾಮುಖ್ಯತೆ ಹೊಂದಿರುವ ಹಬ್ಬಗಳಲ್ಲಿ ಮೊಹರಂ ಕೂಡ ಒಂದು. ಈ ಹಬ್ಬದ ಅಂಗವಾಗಿ ಹರಪನಹಳ್ಳಿಯಲ್ಲಿ ಇಂದು ಏರ್ಪಾಡಾಗಿದ್ದ ಬೃಹತ್ ಮೆರವಣಿಗೆಯು ರಾಜಬೀದಿಗಳಲ್ಲಿ ಸಂಚರಿಸಿತು.

## ಸರ್ಕಾರಿ ಶಾಲೆಗಳ ಉಳಿವಿಗೆ ದಾನಿಗಳ ಸಹಾಯ ಅಗತ್ಯ



ಹರಿಹರ, ಜು. 17 - ಬೆಂಗಳೂರಿನ ಹೆಲ್ಪ್ ಟು ಎಜುಕೇಷನ್ ಫೌಂಡೇಷನ್ ಸಂಸ್ಥೆಯಿಂದ ತಾಲ್ಲೂಕಿನ ಕೆಂಚನಹಳ್ಳಿ, ಪಾಮೇನಹಳ್ಳಿ, ಜಿ.ಟಿ.ಕಟ್ಟೆ ಹಾಗೂ ಹರಿಹರದ ಜೈಭೀಮ ನಗರ, ವಿದ್ಯಾನಗರ ಮತ್ತು ಅಮರಾವತಿ ಗ್ರಾಮಗಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಒಟ್ಟು 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಬ್ಯಾಗ್ ಹಾಗೂ ನೋಟ್ ಬುಕ್‌ಗಳನ್ನು ವಿತರಿಸಲಾಯಿತು.

ಜೈಭೀಮನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬ್ಯಾಗ್ ವಿತರಣಾ ಸಮಾರಂಭದಲ್ಲಿ ಭಾಗವಹಿಸಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಚ್.ಮಲ್ಲೇಶ್ ಮಾತನಾಡಿ, ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಾ ಬಂದಿರುವುದು ಆತಂಕಕಾರಿಯಾಗಿದೆ ಎಂದು ಅವರು ಹೇಳಿದರು.

ಸರ್ಕಾರಿ ಶಾಲೆಗಳ ಜೀರ್ಣೋದ್ಧಾರಕ್ಕಾಗಿಯೇ ಸರ್ಕಾರ ಹತ್ತಾರು ಯೋಜನೆಗಳನ್ನು ಜಾರಿ ಮಾಡಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಪ್ರಯತ್ನ ಮಾಡುತ್ತಿದೆ. ಸರ್ಕಾರದ ಈ ಪ್ರಯತ್ನದ ಜೊತೆಗೆ ಸಮುದಾಯದ ಪಾಲ್ಗೊಳ್ಳುವಿಕೆಯೂ ಅತ್ಯಗತ್ಯವಾಗಿದೆ ಎಂದರು.

ಬೆಂಗಳೂರಿನಲ್ಲಿರುವ ದೊಡ್ಡ ಸಂಸ್ಥೆಗಳು ತಮ್ಮ ಲಾಭಾಂಶದಲ್ಲಿ ಕೆಲ ಭಾಗವನ್ನು ಗ್ರಾಮೀಣ ಭಾಗದ ಶಾಲೆಗಳ ವಿದ್ಯಾರ್ಥಿಗಳ ಪಾಠೋಪಕರಣಕ್ಕೆ ವ್ಯಯಿಸುತ್ತಿರುವುದು ಶ್ಲಾಘನೀಯ. ಇದೇ ಮಾದರಿಯಲ್ಲಿ ಇತರೆ ಸಂಸ್ಥೆಗಳು ಶಾಲೆಗಳ ಭೌತಿಕ ಅಭಿವೃದ್ಧಿಗೂ ಅನುದಾನ ಬಿಡುಗಡೆ ಮಾಡಿದರೆ ಉತ್ತಮ ಎಂದು ಸಲಹೆ ನೀಡಿದರು.

**ಹರಿಹರ**

ಹೆಲ್ಪ್ ಟು ಎಜುಕೇಷನ್ ಫೌಂಡೇಷನ್ ಸಂಸ್ಥೆಯ ಸದಸ್ಯ ಮೋಹನ್ ಮಾತನಾಡಿ, ಪೋಷಕರು ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿ ಎಂದು ಭಾವಿಸಿ, ಅವರಿಗೆ ಉತ್ತಮ ಶಿಕ್ಷಣ ದೊರಕಿಸಬೇಕೆಂದು ಕರೆ ನೀಡಿದರು.

ಹೆಲ್ಪ್ ಟು ಎಜುಕೇಷನ್ ಫೌಂಡೇಷನ್ ಸಂಸ್ಥೆಯ ಮತ್ತೊಬ್ಬ ಸದಸ್ಯ ದೇವರಾಜ್ ಮಾತನಾಡಿ, ಯಾವ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದೆಂಬುದು ನಮ್ಮ ಸಂಸ್ಥೆಯ ಉದ್ದೇಶವಾಗಿದೆ. ಶಿಕ್ಷಣ ಪಡೆದಂತಹ ವ್ಯಕ್ತಿ ದೇಶದ ಅಮೂಲ್ಯ ಸಂಪನ್ಮೂಲವಾಗುತ್ತಾನೆ ಎಂದರು.

ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಶರಣ ಕುಮಾರ್ ಹೆಗಡೆ ಮಾತನಾಡಿ, ಈ ಸಂಸ್ಥೆಯ ಮುಖ್ಯಸ್ಥ ವೆಂಕಟೇಶ್ ಅವರ ಕಾರ್ಯ ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕರಾದ ವೆಂಕಟೇಶ್, ಚನ್ನಬಸಪ್ಪ, ಗಿರಿಜಾಂಬ, ಸತೀಶ್, ನಿಂಗಪ್ಪ, ರಂಗಪ್ಪ, ಶಿವಕುಮಾರ್, ಶಿಕ್ಷಕರಾದ ಪೀರೂನಾಯ್ಕ್, ಪರಶುರಾಮ, ರಾಘವೇಂದ್ರ, ಪ್ರವೀಣ್, ರಾಮನಗೌಡ ಪ್ಯಾಟಿ, ಬಿ.ಎನ್.ವೀರಪ್ಪ, ಶಶಿಕುಮಾರ್, ಗಿರೀಶ್ ಹಾಗೂ ಶಾಲಾಭಿವೃದ್ಧಿ ಸಮಿತಿ ಪದಾಧಿಕಾರಿ, ಪೋಷಕರು ಇದ್ದರು.

## ನಗರದಲ್ಲಿ ಇಂದು ಹೈನುಗಾರಿಕೆ ತರಬೇತಿ

ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ಮತ್ತು ನಾಳೆ ರೈತರಿಗೆ ಆಧುನಿಕ ಹೈನುಗಾರಿಕೆ ಚಟುವಟಿಕೆಗಳ ತರಬೇತಿ ನಡೆಯಲಿದ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

### ಭದ್ರಾ ಜಲಾಶಯ



ನೀರಿನ ಮಟ್ಟ : 148 ಅಡಿ 6 ಇಂಚು
ಒಳ ಹರಿವು : 34544 ಕ್ಯೂಸೆಕ್ಸ್
ಹೊರ ಹರಿವು : 169 ಕ್ಯೂಸೆಕ್ಸ್
ಕಳೆದ ವರ್ಷ : 141 ಅಡಿ 4 ಇಂಚು

## ಭಾವಸಾರ ಕ್ಷತ್ರಿಯ ಭಜನಾ ಮಂಡಳಿಯಿಂದ ಆಷಾಢ ಏಕಾದಶಿ



ದಾವಣಗೆರೆ, ಜು.17 - ನಗರದ ಮಹಾರಾಜ ಪೇಟೆಯಲ್ಲಿರುವ ಶ್ರೀ ಭಾವಸಾರ ಕ್ಷತ್ರಿಯ ಭಜನಾ ಮಂಡಳಿ ವತಿಯಿಂದ ಬುಧವಾರ ಬೆಳಗ್ಗೆ ಆಷಾಢ ಪಂಡರಾಪುರ ವಾರಿ ಬ್ರಹ್ಮರಥೋತ್ಸವದ ಪ್ರಯುಕ್ತ ಸ್ವಾಮಿಗೆ ಅಭಿಷೇಕ, ಕಾಕಡಾರತಿ, ಭಜನೆ ಮತ್ತು ಪಲ್ಲಕ್ಕಿ ಉತ್ಸವ ನೆರವೇರಿತು.

ಭಜನಾ ಮಂಡಳಿ, ದೈವ ಮಂಡಳಿ, ಮಹಿಳಾ ಮಂಡಳಿ, ತರುಣ ಮಂಡಳಿ ಮತ್ತು ಇತರೆ ಅಂಗ ಸಂಸ್ಥೆಗಳ ಸಹಯೋಗದಲ್ಲಿ ಶ್ರೀ ಜ್ಞಾನೇಶ್ವರಿ (ಭಗವದ್ಗೀತೆ) ಪಾರಾಯಣ ಹರಿಪಾಠ, ಸಂಜೆ ಕಲಾವತಿ ಮಹಿಳಾ ಮಂಡಳಿಯಿಂದ ಭಜನೆ ಮತ್ತು ರಾತ್ರಿ ಹ.ಭ.ಪ. ರಾಮಕೃಷ್ಣರಾವ್ ನವಲೆ ಇವರಿಂದ ಕೀರ್ತನ ಮತ್ತು ಅಖಂಡ ಜಾಗರಣೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಭಜನಾ ಮಂಡಳಿ ಅಧ್ಯಕ್ಷ ನಿಂಗಸ್ವಾಮಿರಾವ್ ಖಮಿತ್ಕರ್, ಚಂದ್ರಕಾಂತ್ ವಾದೋನೆ, ವಿನಯ್ ಜಿಂಗಾಡೆ, ವಿನಾಯಕ್ ಟಿಕಾರೆ ಇತರರು ಮತ್ತಿತರರಿದ್ದರು.

## ಅತ್ಯಧಿಕ ಮಳೆ: ತುಂಗಾ ಜಲಾಶಯದಿಂದ ನದಿಗೆ ನೀರು



**ಹಳೆ ಐನೂರು ಗ್ರಾಮ ಹಾಗೂ ಸಾಸ್ವೆಹಳ್ಳಿಯ ದಾಸರ ಬೀದಿ ಜನವಸತಿ ಪ್ರದೇಶದ ಕೆಲವು ಮನೆಗಳು ಜಲಾವೃತಗೊಳ್ಳುವ ಸಾಧ್ಯತೆ - ನಿವಾಸಿಗಳಿಗೆ ಉಪವಿಭಾಗಾಧಿಕಾರಿಗಳ ಎಚ್ಚರಿಕೆ**

ಸಾಸ್ವೆಹಳ್ಳಿ, ಜು. 17 - ತುಂಗಾ ಮತ್ತು ಭದ್ರಾ ಜಲಾಶಯದ ಪ್ರದೇಶದಲ್ಲಿ ಕಳೆದ 3-4 ದಿನಗಳಿಂದ ಅತ್ಯಧಿಕ ಮಳೆ ಆಗುತ್ತಿದ್ದು, ಈಗಾಗಲೇ ತುಂಗಾ ಜಲಾಶಯ ತುಂಬಿರುವ ಕಾರಣ ನದಿಗೆ ನೀರು ಬಿಡಲಾಗಿದೆ.

ಅವಳಿ ತಾಲ್ಲೂಕಿನಲ್ಲಿ ಹಾದು ಹೋಗಿರುವ ತುಂಗಭದ್ರಾ ನದಿ ಅಪಾಯದ ಮಟ್ಟದಲ್ಲಿ ತುಂಬಿ ಹರಿಯುತ್ತಿದ್ದು, ನದಿಯ ನೀರಿನ ಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾದಲ್ಲಿ ಹೋಬಳಿಯ ಹಳೆ ಐನೂರು ಗ್ರಾಮ ಹಾಗೂ ಸಾಸ್ವೆಹಳ್ಳಿಯ ದಾಸರ ಬೀದಿ ಜನವಸತಿ ಪ್ರದೇಶದ ಕೆಲವು ಮನೆಗಳು ಜಲಾವೃತಗೊಳ್ಳಲಿವೆ. ಆ ಮನೆಗಳಿಗೆ ಹೊನ್ನಾಳಿ-ಚನ್ನಗಿರಿ ಉಪ ವಿಭಾಗದ ಉಪವಿಭಾಗಾಧಿಕಾರಿ ವಿ. ಅಭಿಷೇಕ್ ಬುಧವಾರ ಭೇಟಿ ನೀಡಿ ಅಲ್ಲಿನ ನಿವಾಸಿಗಳಿಗೆ ಮುನ್ನೆಚ್ಚರಿಕೆ ನೀಡಿದರು.

ನದಿಯ ನೀರಿನ ಮಟ್ಟ ಇನ್ನೂ ಹೆಚ್ಚಾಗಿ, ಈ ಜನವಸತಿ ಪ್ರದೇಶಕ್ಕೆ ನೀರು ನುಗ್ಗುವ ಸಾಧ್ಯತೆ ಕಂಡು ಬಂದಲ್ಲಿ, ಕೂಡಲೇ ಗಂಜಿ ಕೇಂದ್ರ ತೆರೆದು ಗಂಜಿ ಕೇಂದ್ರಕ್ಕೆ ಇಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಲು ನಮ್ಮ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಅಭಿಷೇಕ್ ಅವರು ತಿಳಿಸಿದರು.

ಸ್ಥಳೀಯ ನಿವಾಸಿಗಳು 'ಪ್ರತಿವರ್ಷ ಮಳೆಗಾಲದಲ್ಲಿ ನದಿಯ ಪ್ರವಾಹದಿಂದ ಮನೆಗಳು ಜಲಾವೃತಗೊಂಡು ಆಗುತ್ತಿರುವ ತೊಂದರೆಗೆ ಶಾಶ್ವತ ಪರಿಹಾರ ದೊರಕಿಸಿಕೊಡಿ' ಎಂದು ಉಪ ವಿಭಾಗಾಧಿಕಾರಿಗಳನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಹೊನ್ನಾಳಿ ತಹಶೀಲ್ದಾರ್ ಪಟ್ಟರಾಜ ಗೌಡ, ಪಿಐ ಸುನಿಲ್ ಕುಮಾರ್, ಉಪತಹಶೀಲ್ದಾರ್ ಚಂದ್ರಪ್ಪ, ರಾಜಸ್ವ ನಿರೀಕ್ಷಕ ದಿನೇಶ್ ಬಾಬು, ಗ್ರಾಮ ಲೆಕ್ಕಾಧಿಕಾರಿ ಧರ್ಮಪ್ಪ, ಮಂಜುನಾಥ್, ಸಿಬ್ಬಂದಿ ತಿಪ್ಪೇಶ್ ಉಪಸ್ಥಿತರಿದ್ದರು.

## ನಮ್ಮಲ್ಲಿ ಮೀಸಲಾತಿ ಇಲ್ಲ, ವಿಶಾಖಪಟ್ಟಣಕ್ಕೆ ಬನ್ನಿ ಐ.ಟಿ. ಕಂಪನಿಗಳಿಗೆ ಆಂಧ್ರ ಸಚಿವ ಲೋಕೇಶ್ ಆಹ್ವಾನ

ಅಮರಾವತಿ, ಜು. 17 - ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸಲು ಕರ್ನಾಟಕ ಸರ್ಕಾರ ಮುಂದಾಗಿರುವ ನಡುವೆ ಹೇಳಿಕೆ ನೀಡಿರುವ ಆಂಧ್ರಪ್ರದೇಶದ ಐ.ಟಿ. ಸಚಿವ ನಾರಾ ಲೋಕೇಶ್, ನಮ್ಮಲ್ಲಿ ಕುಶಲಿಗಳ ನೇಮಕಕ್ಕೆ ಯಾವುದೇ ನಿರ್ಬಂಧ ಇಲ್ಲ. ಇಲ್ಲಿಗೆ ಸ್ಥಳಾಂತರಗೊಳ್ಳಿ ಎಂದು ಸಾಫ್ಟ್‌ವೇರ್ ಕಂಪನಿಗಳಿಗೆ ಕರೆ ನೀಡಿದ್ದಾರೆ.

ಕರ್ನಾಟಕ ಸರ್ಕಾರ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸುವ ಕ್ರಮಕ್ಕೆ ಸಾಫ್ಟ್‌ವೇರ್ ಕಂಪನಿಗಳ ಒಕ್ಕೂಟವಾದ ನ್ಯಾಸ್ಕಾಂ ತೀವ್ರ ವಿರೋಧ ವ್ಯಕ್ತಪಡಿಸಿತ್ತು.

ನಂತರ ಹೇಳಿಕೆ ನೀಡಿರುವ ಸಚಿವ ಲೋಕೇಶ್, ವಿಶಾಖಪಟ್ಟಣದಲ್ಲಿ ನಿಮ್ಮ ಘಟಕಗಳನ್ನು ಸ್ಥಾಪಿಸಿ. ನಿಮಗೆ ಅತ್ಯಂತ ಸೂಕ್ತವಾದ ಕುಶಲಿಗಳನ್ನು ನಿರ್ಮಿಸಿಕೊಳ್ಳಿ, ಇದಕ್ಕೆ ಆಂಧ್ರ ಸರ್ಕಾರದಿಂದ ಯಾವುದೇ ನಿರ್ಬಂಧವಿಲ್ಲ ಎಂದಿದ್ದಾರೆ.

ಆಂಧ್ರಪ್ರದೇಶ ನಿಮ್ಮನ್ನು ಸ್ವಾಗತಿಸಲು ಸಿದ್ಧವಿದೆ, ನಮ್ಮ ಸಂಪರ್ಕದಲ್ಲಿರಿ ಎಂದೂ ಹೇಳಿದ್ದಾರೆ. ನಿಮ್ಮ ನಿರಾಶೆ ನಮಗೆ ಅರ್ಥವಾಗುತ್ತದೆ. ನೀವು ಇಲ್ಲಿ ನಿಮ್ಮ ಉದ್ಯಮವನ್ನು ವಿಸ್ತರಿಸಬಹುದು ಇಲ್ಲವೇ ಉದ್ಯಮವನ್ನು ಸ್ಥಳಾಂತರಿಸಬಹುದು. ಐ.ಟಿ., ಎ.ಐ. ಹಾಗೂ ಡಾಟಾ ಸೆಂಟರ್ ಕ್ಲಸ್ಟರ್ ವಿಶಾಖಪಟ್ಟಣದಲ್ಲಿ ಲಭ್ಯವಿದೆ ಎಂದು ಹೇಳಿದ್ದಾರೆ.

## ಜಿಗಳಿ, ಸಿರಿಗೆರೆ, ಭಾನುವಳ್ಳಿಯಲ್ಲಿ ಸಂಭ್ರಮದ ಮೊಹರಂ ಆಚರಣೆ



ಮಲೇಬೆನ್ನೂರು, ಜು.17 - ಹಿಂದೂ-ಮುಸ್ಲಿಮರ ಭಾವೈಕ್ಯತೆಯ ಸಂಕೇತವಾದ ಮೊಹರಂ ಹಬ್ಬವನ್ನು ಹೊಳೆಸಿರಿಗೆರೆ, ಭಾನುವಳ್ಳಿ, ಜಿಗಳಿ, ಯಲವಟ್ಟಿ ಮತ್ತು ಕೆ.ಎನ್. ಹಳ್ಳಿ ಗ್ರಾಮಗಳಲ್ಲಿ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು.

ಈ ಎಲ್ಲಾ ಗ್ರಾಮಗಳಲ್ಲಿ ಕೈ ದೇವರುಗಳನ್ನು ಪ್ರತಿಷ್ಠಾಪಿಸಿ, ಹಿಂದೂ-ಮುಸ್ಲಿಂ ಬಾಂಧವರು ವಿಶೇಷ ಪೂಜೆಯೊಂದಿಗೆ ಸಕ್ಕರೆ-ಬೆಲ್ಲ ನೈವೇದ್ಯ ಗೈದು ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಪ್ರಾರ್ಥಿಸಿದರು.

ದೇವರನ್ನು ಹೊತ್ತವರು ಅಗ್ನಿ ಕುಂಡ ತುಳಿದು, ಗಮನ ಸೆಳೆದರು. ಬುಧವಾರ ಸಂಜೆ ಮೆರವಣಿಗೆ ಮೂಲಕ ಹೊಳೆ ಪೂಜೆ ನೆರವೇರಿಸಿ, ಹಬ್ಬಕ್ಕೆ ತೆರೆ ಎಳೆಯಲಾಯಿತು.

## ವಾಲ್ಮೀಕಿ ನಿಗಮದ ಹಣ ಚುನಾವಣೆಗೆ ಮದ್ಯ, ವಾಹನಗಳ ಖರೀದಿಗೆ ದುರ್ಬಳಕೆ

ನವದೆಹಲಿ, ಜು. 17 - ಕರ್ನಾಟಕದ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ದುರ್ಬಳಕೆಯಾದ ದೊಡ್ಡ ಪ್ರಮಾಣದ ಹಣವನ್ನು ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮದ್ಯ ಖರೀದಿ ಹಾಗೂ ದುಬಾರಿ ವಾಹನಗಳ ಖರೀದಿಗೆ ಬಳಸಲಾಗಿತ್ತು ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ ಈ ಬಗ್ಗೆ ಹೇಳಿಕೆ ನೀಡಿದ್ದು, ಮಾಜಿ ಸಚಿವ ಬಿ. ನಾಗೇಂದ್ರ ಅವರು ನಿಗಮದ ಹಣ ರವಾನೆ ಹಾಗೂ ನಿರ್ವಹಣೆಯಲ್ಲಿ ಭಾಗಿಯಾಗಿದ್ದರು ಆರೋಪಿಸಿದೆ.

ಮಾಜಿ ಸಚಿವ ನಾಗೇಂದ್ರ ಅವರನ್ನು ಜಾರಿ ನಿರ್ದೇಶನಾಲಯ ಕಳೆದ ವಾರ ಬಂಧಿಸಿತ್ತು. ನಂತರದಿಂದ ಅವರು ಜಾರಿ ನಿರ್ದೇಶನಾಲಯದ ಕಸ್ಟಡಿಯಲ್ಲಿ ಇದ್ದಾರೆ.

ನಿಗಮದ ಸುಮಾರು 90 ಕೋಟಿ ರೂಪಾಯಿಗಳನ್ನು ಆಂಧ್ರಪ್ರದೇಶ ಹಾಗೂ ತೆಲಂಗಾಣದ 18 ನಕಲಿ ಖಾತೆಗಳಿಗೆ ವರ್ಗಾಯಿಸಲಾಗಿತ್ತು. ನಕಲಿ ಕಂಪನಿಗಳು ಹಾಗೂ ಶೆಲ್ ಖಾತೆಗಳ ಮೂಲಕ ಹಣವನ್ನು ವರ್ಗಾಯಿಸಲಾಗಿತ್ತು.

ದೊಡ್ಡ ಪ್ರಮಾಣದ ಹಣವನ್ನು ಲೋಕಸಭಾ ಚುನಾವಣೆಗೆ ಮುಂಚೆ ಮದ್ಯ ಖರೀದಿಗೆ ಬಳಸಲಾಗಿತ್ತು. ಇನ್ನಷ್ಟು ಹಣವನ್ನು ದುಬಾರಿ ವಾಹನಗಳ ಖರೀದಿಗೆ ಬಳಸಲಾಗಿತ್ತು.

ಮಾಜಿ ಸಚಿವ ನಾಗೇಂದ್ರ ಅವರ ನಿಕಟವರ್ತಿಗಳು ಹಣದ ವರ್ಗಾವಣೆ ಹಾಗೂ ನಿರ್ವಹಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ.


## ವಾಲ್ಮೀಕಿ ನಿಗಮ ಹಗರಣ ನಾಗೇಂದ್ರ ಪತ್ನಿ ಇಡಿ ವಶಕ್ಕೆ

(1ನೇ ಪುಟದಿಂದ) ಇಡೀ ದಿನ ಶಾಂತಿನಗರದ ತಮ್ಮ ಕಚೇರಿಯಲ್ಲಿ ಹಗರಣಕ್ಕೆ ಸಂಬಂಧಿಸಿದಂತೆ ಅವರ ವಿಚಾರಣೆ ನಡೆಸಲಾಗಿದೆ.

ನಿಗಮದಿಂದ ನೂರಾರು ಕೋಟಿ ರೂ.ಗಳನ್ನು ಅಕ್ರಮವಾಗಿ ಬೇನಾಮಿ ಖಾತೆಗಳಿಗೆ ವರ್ಗಾವಣೆ ಮಾಡಿದ್ದು, ಇದರಲ್ಲಿ ಅಂದಿನ ಸಚಿವರಾಗಿದ್ದ ನಾಗೇಂದ್ರ ಅವರು ಪ್ರಮುಖ ರೂವಾರಿ ಎಂಬ ಆರೋಪವಿದೆ.

ನಾಗೇಂದ್ರ ಅವರ ಬ್ಯಾಂಕ್ ಖಾತೆ ಜೊತೆಗೆ ಅವರ ಪತ್ನಿ ಖಾತೆಯಿಂದಲೂ ಹೆಚ್ಚು ಮೊತ್ತದ ಹಣ ವರ್ಗಾವಣೆ ಆಗಿರುವ ವಿಚಾರ ತನಿಖೆಯಿಂದ ಕಂಡುಬಂದ ಹಿನ್ನೆಲೆಯಲ್ಲಿ ಮಂಜುಳಾ ಅವರನ್ನು ವಶಕ್ಕೆ ಪಡೆಯಲಾಗಿದೆ.


### ಪುಣ್ಯ ಸ್ಮರಣೆ



ದಿ|| ಶ್ರೀ ಮರುಳಸಿದ್ದಪ್ಪ
ಕು. ಗಡ್ಡದಗೂಳಿ
ಮರಣ : 27.06.1986

ದಿ|| ಶ್ರೀಮತಿ ಗುರುಬಸಮ್ಮ
ಮ. ಗಡ್ಡದಗೂಳಿ
ಮರಣ : 18.07.2000

ನೀವುಗಳು ನಮ್ಮನ್ನು ಅಗಲಿ ಇಂದಿಗೆ ಹಲವು ವರ್ಷಗಳಾದವು. ಸ್ವರ್ಗವಾಸಿಗಳಾದ ನಿಮ್ಮ ಆಶೀರ್ವಾದಗಳಿಂದ ಮುನ್ನಡೆಯುತ್ತಿರುವ ಮತ್ತು ಪ್ರೀತಿ ತುಂಬಿದ ನಿಮ್ಮ ನಡೆ ನುಡಿಯನ್ನು ಸದಾ ಸ್ಮರಿಸುತ್ತಿರುವ...

ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಮರಿ ಮೊಮ್ಮಕ್ಕಳು, ರಾಣೇಬೆನ್ನೂರು. ದಾವಣಗೆರೆ ಮತ್ತು ಬೆಂಗಳೂರು.

### - : ಪುಣ್ಯ ಸ್ಮರಣೆ : -



**ದಿ. ಶ್ರೀಮತಿ ಹನುಮಕ್ಕ**

ನೀವು ನಮ್ಮನ್ನಗಲಿ ಒಂಭತ್ತು ವರ್ಷಗಳಾದವು.
ತಾವು ಹಾಕಿಕೊಟ್ಟ ಸತ್ಯ, ಪ್ರಾಮಾಣಿಕತೆ, ಪ್ರೀತಿ, ವಾತ್ಸಲ್ಯದ ದಾರಿಯಲ್ಲಿ ಸಾಗುತ್ತಾ ಸದಾ ತಮ್ಮ ಸ್ಮರಣೆಯಲ್ಲಿ...
ಪತಿ ಪರಸಪ್ಪ ಹಾಗೂ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧು-ಬಾಂಧವರು ಸಾಗುತ್ತಿದ್ದೇವೆ.
ತಮ್ಮ ಕೃಪಾಶೀರ್ವಾದ ಸದಾ ನಮ್ಮೆಲ್ಲರ ಮೇಲಿರಲೆಂದು ಕುಟುಂಬಸ್ಥರ ಬಂಧು-ಮಿತ್ರರ ಪ್ರಾರ್ಥನೆ.

**ಸೋಮಶೇಖರಪ್ಪ ಬಿನ್ ಪರಸಪ್ಪ**
ಹೆಡ್ ಕಾನ್ಸ್‌ಸ್ಟೇಬಲ್ ಬಾರಕ್ ಟ್ಯಾಪ್ಸ್ ತಾರಾಪೂರ್, ಮುಂಬೈ (ಹದಡಿ ಗ್ರಾಮ)


## ಓಮನ್ ಮಸೀದಿಯ ಮೇಲೆ ಐಸಿಸ್ ದಾಳಿ : ಓರ್ವ ಭಾರತೀಯ ಹತ

ದುಬೈ, ಜು. 17 - ಓಮನ್ ರಾಜಧಾನಿ ಮಸ್ಕತ್‌ನಲ್ಲಿರುವ ಶಿಯಾ ಮುಸ್ಲಿಮ್ ಮಸೀದಿಯ ಮೇಲೆ ಇಸ್ಲಾಮಿಕ್ ಸ್ಟೇಟ್ ಉಗ್ರರು ನಡೆಸಿದ ದಾಳಿಯಲ್ಲಿ ಓರ್ವ ಭಾರತೀಯ ಸೇರಿದಂತೆ ಆರು ಜನ ಸಾವನ್ನಪ್ಪಿದ್ದಾರೆ.

ಸೋಮವಾರ ರಾತ್ರಿ ಇಮಾಮ್ ಅಲಿ ಮಸೀದಿಯ ಬಳಿ ನಡೆದ ದಾಳಿಯಲ್ಲಿ ಓರ್ವ ಪೊಲೀಸ್, ನಾಲ್ವರು ಪಾಕಿಸ್ತಾನೀಯರು ಹಾಗೂ ಓರ್ವ ಭಾರತೀಯ ಸಾವನ್ನಪ್ಪಿದ್ದಾರೆ. 28 ಇತರರು ಗಾಯಗೊಂಡಿದ್ದಾರೆ.

ಘಟನೆ ನಡೆದ ನಂತರ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿದಾಗ, ದಾಳಿ ನಡೆಸಿದ ಮೂವರು ಉಗ್ರರು ಹತರಾಗಿದ್ದಾರೆ. ಇಸ್ಲಾಮಿಕ್ ಸ್ಟೇಟ್ ಉಗ್ರವಾದಿ ಸಂಘಟನೆ ದಾಳಿಯ ಹೊಣೆ ಹೊತ್ತುಕೊಂಡಿದೆ.

## ವಸತಿ ಶಾಲೆಗೆ ವಿಶೇಷ ವರ್ಗದ ಮಕ್ಕಳ ಪ್ರವೇಶಕ್ಕೆ ಅಹ್ವಾನ

ದಾವಣಗೆರೆ, ಜು. 17 - ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ನಡೆಯುತ್ತಿರುವ ವಸತಿ ಶಾಲೆಗಳಿಗೆ 6ನೇ ತರಗತಿಗೆ ಶೇ. 10 ರಷ್ಟು ಮೀಸಲಿರಿಸಿ ವಿಶೇಷ ವರ್ಗಗಳ ಅಡಿಯಲ್ಲಿ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಸಫಾಯಿ ಕರ್ಮಚಾರಿ, ಗುರುತಿಸಲ್ಪಟ್ಟ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳು ಮತ್ತು ಮೊಮ್ಮಕ್ಕಳು, ಪೌರ ಕಾರ್ಮಿಕ, ಚಿತಾಗಾರದ ಕಾರ್ಮಿಕರ ಮಕ್ಕಳು, ಸ್ಮಶಾನ ಕಾರ್ಮಿಕರ ಮಕ್ಕಳು, ಬಾಲ ಕಾರ್ಮಿಕರು, ಜೀತ ವಿಮುಕ್ತ ಕಾರ್ಮಿಕರ ಮಕ್ಕಳು, ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು, ಶೇ. 25 ಗಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು, ಹೆಚ್.ಐ.ವಿ ಗೆ ತುತ್ತಾದ ಪೋಷಕರ ಮಕ್ಕಳು, ಏಕ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು, ಗುರುತಿಸಿರುವ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ, ಅತೀ ಸೂಕ್ಷ್ಮ ಸಮುದಾಯದ, ಸೈನಿಕರು ಮತ್ತು ಮಾಜಿ ಸೈನಿಕರು, ಸರ್ಕಾರಿ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಆಶ್ರಮ ವಸತಿ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳು ಪ್ರವೇಶ ಪಡೆಯಬಹುದಾಗಿದೆ.

ಜಿಲ್ಲೆಯಲ್ಲಿ 22 ವಸತಿ ಶಾಲೆಗಳಿದ್ದು ಈ ವಸತಿ ಶಾಲೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವಿಶೇಷ ವರ್ಗದ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ 6ನೇ ತರಗತಿಯಲ್ಲಿ ಓದುತ್ತಿದ್ದಲ್ಲಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿ ಕಚೇರಿಗೆ ಅಥವಾ ಹತ್ತಿರದ ವಸತಿ ಶಾಲೆ (ಪ.ಜಾತಿ,ಪ.ಪಂ,ಹಿ.ವರ್ಗ) ಪ್ರಾಂಶುಪಾಲರನ್ನು ಸಂಪರ್ಕಿಸಿ ಪ್ರವೇಶ ಪಡೆಯಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ ತಿಳಿಸಿದ್ದಾರೆ.

## ಬಂಜಾರ ಸಮುದಾಯದಿಂದ ಸಂಭ್ರಮದ ಸೀತ್ಲಾ ಹಬ್ಬ



(1ನೇ ಪುಟದಿಂದ) ಹಾಗೂ ಮಾತೆಯರಿಗೆ ಸಿಹಿ ಭೋಜನದ ಎಡೆ ಹಾಗೂ ಪೂಜೆ ಸಲ್ಲಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಬಂಜಾರ್ ಸಮಾಜದ ಮುಖಂಡರಾದ ಕುಬೇಂದ್ರ ನಾಯ್ಕ, ಡಾ. ರಮೇಶ್ ಕುಮಾರ್, ಚರ್ತಯ್ಯನಾಯ್ಕ್, ರಘುರಾಮ್ ನಾಯ್ಕ್, ಮಂಜಾನಾಯ್ಕ್, ಡಾ. ಶಂಕರ್ ನಾಯ್ಕ್, ಚಂದ್ರ ನಾಯ್ಕ್, ರವಿನಾಯ್ಕ್, ಶಿವಾಜಿನಾಯ್ಕ್, ರಾಜ್‌ಕುಮಾರ್, ಎಲ್. ಮಂಜಾನಾಯ್ಕ್, ಪೊಲೀಸ್ ವಾಸುದೇವ ನಾಯ್ಕ್, ಲಕ್ಯಾನಾಯ್ಕ್, ಕೃಷ್ಣನಾಯ್ಕ್, ಹರಕನಾಳು ಮಂಜಾನಾಯ್ಕ್, ಕುಮಾರ್ ನಾಯ್ಕ್, ವಕೀಲ ಮಂಜಾನಾಯ್ಕ್, ಜಗದೀಶ್ ನಾಯ್ಕ್, ರಮೇಶ್ ನಾಯ್ಕ್, ಭಜನನಾಯ್ಕ್, ಶ್ರೀಕಾಂತ್ ನಾಯ್ಕ್, ರವಿನಾಯ್ಕ್, ರಾಠೋಡ್ ನಾಯ್ಕ್, ಮಂಜ್ಯಾನಾಯ್ಕ್, ಸೇರಿದಂತೆ ಬಂಜಾರ್ ಸಮುದಾಯದ ಹಿರಿಯ ಮತ್ತು ಕಿರಿಯ ಯುವಕರು ಇದ್ದರು.

## ಗುರುಕುಲ ಮಾರ್ಷಲ್ಸ್ ಆರ್ಟ್ಸ್ ಮತ್ತು ಸೆಲ್ಫ್ ಡಿಫೆನ್ಸ್ ಅಕಾಡೆಮಿ ಕರಾಟೆ ಪಟುಗಳ ಸಾಧನೆ



ದಾವಣಗೆರೆ, ಜು. 17 - ನಗರದಲ್ಲಿ ನಡೆದ ಪ್ರಥಮ ರಾಷ್ಟ್ರಮಟ್ಟದ ಓಪನ್ ಕರಾಟೆ ಚಾಂಪಿಯನ್‌ಶಿಪ್-2024 'ಬೆಣ್ಣೆ ನಗರಿ ಕಪ್'ನ್ನು ಲಯನ್ಸ್ ಕ್ಲಬ್ ಶಾಲೆ ಹಾಗೂ ದೇವರಾಜ ಅರಸು ಬಡಾವಣೆಯ ಸ್ವಿಮ್ಮಿಂಗ್ ಪೂಲ್ ಹತ್ತಿರದಲ್ಲಿ ಅಭ್ಯಾಸ ಮಾಡುತ್ತಿರುವ ಕರಾಟೆ ಕ್ರೀಡಾಪಟುಗಳು ಭಾಗವಹಿಸಿ ವಿಜೇತರಾಗಿದ್ದಾರೆ.

ಬಾಲಕಿಯರ 9 ವರ್ಷದೊಳಗಿನ ವಿಭಾಗದಲ್ಲಿ ಸಮರ್ಥ ಜಿ.ಎಸ್., ಕುಮಿತೆಯಲ್ಲಿ ಪ್ರಥಮ ಮತ್ತು ಕಥಾ ವಿಭಾಗದಲ್ಲಿ ತೃತೀಯ ಸ್ಥಾನ. ಚಾಣಕ್ಯ ಬಿ.ಎಂ., ಕುಮಿತೆ ಮತ್ತು ಕಥಾ ವಿಭಾಗದಲ್ಲಿ ದ್ವಿತೀಯ ಸ್ಥಾನ, ಪ್ರಥಮ ಆರ್.. ಕುಮಿತೆ ಮತ್ತು ಕಥಾ ವಿಭಾಗದಲ್ಲಿ ದ್ವಿತೀಯ ಸ್ಥಾನ, ಚೇತನ್ ಹೆಚ್.ಹೆಚ್.. ಕುಮಿತೆ ಮತ್ತು ಕಥಾ ವಿಭಾಗದಲ್ಲಿ ತೃತೀಯ ಸ್ಥಾನ. ಚಿನ್ಮಯ್ ಕೆ.ಪಿ.. ಕುಮಿತೆಯಲ್ಲಿ ದ್ವಿತೀಯ, ಕಥಾ ವಿಭಾಗದಲ್ಲಿ ತೃತೀಯ ಸ್ಥಾನ. ಕಾರ್ತಿಕ್ ಎ., ಕುಮಿತೆ ವಿಭಾಗದಲ್ಲಿ ತೃತೀಯ, ಕಥಾ ವಿಭಾಗದಲ್ಲಿ ದ್ವಿತೀಯ ಸ್ಥಾನ. ನಿಖಿಲ್ ಎನ್., ಕುಮಿತೆ ಮತ್ತು ಕಥಾ ವಿಭಾಗದಲ್ಲಿ ತೃತೀಯ ವಿದ್ವತ್ ವಿ.ಪಿ., ಚೇತನ್ ಡಿ. ಮತ್ತು ದೇವ್ ಚೌಧರಿ ಕಥಾ ವಿಭಾಗದಲ್ಲಿ ತೃತೀಯ ಕಾರ್ತಿಕ್ ಎಸ್.ಪಿ., ಕುಮಿತೆ ಮತ್ತು ಕಥಾ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

## ಹರಿಹರ : ನದಿಗೆ ಹಾರಿ ಆತ್ಮಹತ್ಯೆ

ಹರಿಹರ, ಜು,17 - ಬೆಂಗಳೂರು ಬನ್ನೇರುಘಟ್ಟ, ದೇವರ ಚಿಕ್ಕನಹಳ್ಳಿ ಬಡಾವಣೆ ನಿವಾಸಿ ಎನ್ನಲಾದ ಮಾರುತಿ (57) ಎಂಬಾತ ನಿನ್ನೆ ಸಂಜೆ ತುಂಬಿ ಹರಿಯುತ್ತಿರುವ ತುಂಗಭದ್ರಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪಾನಿಪುರಿ ವ್ಯಾಪಾರ ಮಾಡಿಕೊಂಡಿದ್ದ ಮಾರುತಿ, ಇತ್ತೀಚೆಗೆ ಆರೋಗ್ಯದಲ್ಲಿ ಸಮಸ್ಯೆ ಉಂಟಾಗಿ ಮಾನಸಿಕವಾಗಿ ಜಿಗುಪ್ಸೆ ಹೊಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತ ವ್ಯಕ್ತಿಯ ಮಗ ನಾಗರಾಜ್ ತಿಳಿಸಿದ್ದಾರೆ.

ನಗರ ಠಾಣೆಯ ಪೊಲೀಸ್ ಸಿಬ್ಬಂದಿಗಳು ಮತ್ತು ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಶವ ಪತ್ತೆಗೆ ಗುತ್ತೂರು, ದೀಟೂರು, ಸಾರಥಿ ಹಾಗೂ ಚಿಕ್ಕಬಿದರಿ ಗ್ರಾಮದ ನದಿ ಪಾತ್ರದಲ್ಲಿ ಮುಂದಾಗಿದ್ದು, ನದಿಯಲ್ಲಿ ನೀರಿನ ರಭಸವು ಕಡಿಮೆ ಆದ ಮೇಲೆ ಪತ್ತೆ ಸಾಧ್ಯವಾಗುತ್ತದೆ ಎಂದು ಅಗ್ನಿಶಾಮಕ ಠಾಣೆ ಪಿಎಸ್ಐ ಸಂಜೀವ್ ಕುಮಾರ್ ಹೇಳಿದರು. ಸ್ಥಳದಲ್ಲಿ ನಗರ ಠಾಣೆಯ ಪೊಲೀಸ್ ನಿರೀಕ್ಷಕ ದೇವಾನಂದ್ ಮತ್ತು ಸಿಬ್ಬಂದಿಗಳು ಹಾಜರಿದ್ದರು.

# ರಷ್ಯಾ ಸಂಘರ್ಷ : ರಾಜಕೀಯ ಬದಲಾವಣೆ, ನೆರವಿನ ಅನಿಶ್ಚಿತತೆ - ಉಕ್ರೇನ್‌ಗೆ ಕಡು ಸಂಕಷ್ಟ

ಕೀವ್, ಜು. 17 - ರಷ್ಯಾ ವಿರುದ್ಧದ ಸಮರ ಆರಂಭವಾಗಿ 30 ತಿಂಗಳು ಉರುಳುತ್ತಿರುವಂತೆಯೇ, ಸಮರ ಭೂಮಿಯಲ್ಲಿ ಉಕ್ರೇನ್ ಸಂಕಷ್ಟಗಳು ತೀವ್ರವಾಗುತ್ತಿವೆ. ಅದರಲ್ಲೂ ಅಮೆರಿಕದಲ್ಲಿ ರಾಜಕೀಯ ಬದಲಾವಣೆಯ ಗಾಳಿ ಬೀಸುತ್ತಿರುವುದು ಸಮಸ್ಯೆ ಹೆಚ್ಚಿಸುತ್ತಿದೆ.

ಉಕ್ರೇನ್‌ಗೆ ನೆರವು ನೀಡುವ ದೇಶಗಳಲ್ಲಿ ಅಮೆರಿಕ ಮುಂಚೂಣಿಯಲ್ಲಿದೆ. ಅಮೆರಿಕದ ಸೈನಿಕ ನೆರವು ಆರು ತಿಂಗಳಿನಿಂದ ವಿಳಂಬವಾಗಿದೆ. ಉತ್ತಮ ಉಪಕರಣ ಹೊಂದಿರುವ ರಷ್ಯಾ ಸೈನ್ಯ, ನಿಧಾನವಾಗಿ ಉಕ್ರೇನ್ ನೆಲವನ್ನು ಆಕ್ರಮಿಸುತ್ತಿದೆ.

ಮುಂದಿನ ಎರಡು ಮೂರು ತಿಂಗಳು ಉಕ್ರೇನ್ ಸೈನ್ಯಕ್ಕೆ ಅತ್ಯಂತ ಕಠಿಣವಾಗಿದೆ ಎಂದು ಕಾರ್ನೀಜ್ ಎಂಡೋಮೆಂಟ್‌ನ ರಕ್ಷಣಾ ವಿಶ್ಲೇಷಕ ಮೈಖೆಲ್ ಕೋಫ್‌ಮ್ಯಾನ್ ಹೇಳಿದ್ದಾರೆ.

ಅಲ್ಲದೇ ಇನ್ನೆಷ್ಟು ಕಾಲ ಪಶ್ಚಿಮದ ರಾಜಕೀಯ ಹಾಗೂ ಸೈನಿಕ ನೆರವು ಮುಂದುವರೆಯಲಿದೆ ಎಂಬ ಚಿಂತೆಯೂ ಉಕ್ರೇನ್‌ಗೆ ಕಾಡುತ್ತಿದೆ.

ಸೋಮವಾರದಂದು ಅಮೆರಿಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು ಸೆನೆಟರ್ ಜೆ.ಡಿ. ವ್ಯಾನ್ಸೆ ಅವರನ್ನು ತಮ್ಮ ಉಪಾಧ್ಯಕ್ಷ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಸಾವಿರಾರು ಮೈಲಿಗಳ ದೂರದಲ್ಲಿ ನಡೆಯುವ ಸಮರಗಳ ಬದಲು, ಅಮೆರಿಕ ತನ್ನ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಬೇಕು ಎಂದು ವ್ಯಾನ್ಸೆ ಪ್ರತಿಪಾದಿಸಿದ್ದಾರೆ. ಆದರೆ, ಪುತಿನ್ ನಡೆಸಿರುವ ದಾಳಿ ತಪ್ಪು ಎಂದೂ ಅವರು ಹೇಳಿದ್ದಾರೆ.

ನಾನು ಅಧಿಕಾರಕ್ಕೆ ಬಂದರೆ ತ್ವರಿತವಾಗಿ ಸಮರ ನಿಲ್ಲಿಸುತ್ತೇನೆ ಎಂದು ಟ್ರಂಪ್ ಹೇಳಿದ್ದಾರೆ. ಯಾವ ರೀತಿ ಎಂಬುದನ್ನು ಅವರು ಹೇಳಿಲ್ಲ.

ಈ ನಡುವೆ, ಹಂಗೇರಿಯ ರಷ್ಯಾ ಪರ ಅಧ್ಯಕ್ಷ ವಿಕ್ಟರ್ ಒರ್ಬಾನ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಹಾಗೂ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜೊತೆ ಸಭೆ ನಡೆಸಿದ್ದು ಆಸಕ್ತಿಕರವಾಗಿದೆ.

ಉಕ್ರೇನ್ ಸಮರವು, ಎರಡನೇ ಮಹಾಸಮರದ ನಂತರ ಯುರೋಪ್‌ನಲ್ಲಿ ನಡೆಯುತ್ತಿರುವ ದೊಡ್ಡ ಸಂಘರ್ಷವಾಗಿದೆ. ಇದರಿಂದ ಉಕ್ರೇನ್ ಹಾಗೂ ರಷ್ಯಾ ಕಡೆಯ ಸಾವಿರಾರು ಜನರು ಸಾವನ್ನಪ್ಪಿದ್ದಾರೆ. ಈ ಸಮರ ಸದ್ಯಕ್ಕೆ ನಿಲ್ಲುವ ಸೂಚನೆ ಕಾಣುತ್ತಿಲ್ಲ.

ಫೆಬ್ರವರಿ 2022ರಂದು ದಾಳಿ ಆರಂಭಿಸಿದ ನಂತರ, ಉಕ್ರೇನ್‌ನ ಶೇ.18ರಷ್ಟು ಜಾಗ ರಷ್ಯಾ ವಶದಲ್ಲಿದೆ. ಒಂದು ಹಂತದಲ್ಲಿ ರಷ್ಯಾ ಹೆಚ್ಚು ಜಾಗ ವಶಪಡಿಸಿಕೊಂಡಿತ್ತು. ಆದರೆ, ನಂತರ ಅದನ್ನು ಹಿಮ್ಮೆಟ್ಟಿಸಲಾಗಿದೆ. 2014ರಲ್ಲಿ ಉಕ್ರೇನ್‌ನ ಕ್ರಿಮಿಯಾ ಅನ್ನು ರಷ್ಯಾ ವಶಪಡಿಸಿಕೊಂಡಿತ್ತು.

ಫೆಬ್ರವರಿಯಲ್ಲಿ ಅವ್ಡಿವ್ಕಾ ನಗರದ ಮೇಲೆ ಹಿಡಿತ ಸಾಧಿಸಿದ ನಂತರ ರಷ್ಯಾಗೆ ಪ್ರಮುಖ ಮುನ್ನಡೆ ದೊರೆತಿಲ್ಲ. ಆದರೆ, ಗಡಿ ವಲಯದ ಖಾರ್ಕೀವ್, ಡೊನೆಸ್ಕ್ ಹಾಗೂ ಝುಪೊರಿಝಿಯಾಗಳ ಮೇಲೆ ರಷ್ಯಾ ಒತ್ತಡ ಹೇರುತ್ತಿದೆ.

ಉಕ್ರೇನ್ ರಕ್ಷಣಾ ಪಡೆಗಳು ಸ್ವಲ್ಪ ಜಾಗ ಬಿಟ್ಟುಕೊಟ್ಟು, ನಂತರ ರಷ್ಯಾ ಸೈನ್ಯ ಹಿಮ್ಮೆಟ್ಟಿಸುವ ತಂತ್ರ ಅನುಸರಿಸುತ್ತಿವೆ. ಆದರೆ, ಸಮರ ದೀರ್ಘವಾದಷ್ಟೂ ರಷ್ಯಾಗೆ ಅನುಕೂಲವಾಗಲಿದೆ ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ಈ ನಡುವೆ ರಷ್ಯಾ, ನಾಗರಿಕ ಮೂಲಭೂತ ಸೌಲಭ್ಯಗಳ ಮೇಲೂ ದಾಳಿ ನಡೆಸುತ್ತಿದೆ. ಕಳೆದ ವಾರ ಉಕ್ರೇನ್‌ನ ಕೀವ್ ಮಕ್ಕಳ ಆಸ್ಪತ್ರೆಯ ಮೇಲೆ ನಡೆಸಲಾದ ದಾಳಿಯಲ್ಲಿ 31 ಜನ ಸಾವನ್ನಪ್ಪಿದ್ದರು.

ಉಕ್ರೇನ್‌ನ ವಿದ್ಯುತ್ ಪೂರೈಕೆ ಕುಂಠಿತಗೊಳಿಸುವುದು ರಷ್ಯಾದ ಮತ್ತೊಂದು ಗುರಿಯಾಗಿದೆ. ದೂರಗಾಮಿ ಕ್ಷಿಪಣಿ ಹಾಗೂ ಡ್ರೋನ್ ಬಳಸಿ ವಿದ್ಯುತ್ ಪೂರೈಕೆ ಜಾಲದ ಮೇಲೆ ದಾಳಿ ನಡೆಸಲಾಗುತ್ತಿದೆ.

ರಷ್ಯಾದ ದಾಳಿಯಿಂದಾಗಿ ಉಕ್ರೇನ್‌ನ ಶೇ.80ರಷ್ಟು ಶಾಖೋತ್ಪನ್ನ ವಿದ್ಯುತ್ ಘಟಕಗಳು ಹಾಗೂ ಮೂರನೇ ಒಂದರಷ್ಟು ಜಲ ವಿದ್ಯುತ್ ಘಟಕಗಳಿಗೆ ಹಾನಿಯಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಜೆಲೆನ್‌ಸ್ಕಿ ಹೇಳಿದ್ದಾರೆ.

ಇದರಿಂದಾಗಿ ಮುಂಬರುವ ಚಳಿಗಾಲದಲ್ಲಿ ಉಕ್ರೇನ್ ಸಾಕಷ್ಟು ಸಮಸ್ಯೆಗಳನ್ನು ಎದುರಿಸಲಿದೆ. ಉಕ್ರೇನ್ ಬೃಹತ್ ದೇಶವಾಗಿರುವ ಕಾರಣ, ದೊಡ್ಡ ಪ್ರಮಾಣದಲ್ಲಿ ವೈಮಾನಿಕ ರಕ್ಷಣೆಯ ಅಗತ್ಯವೂ ಇದೆ.

ಉಕ್ರೇನ್ ಸೈನ್ಯದ ಬಳಿ ಇರುವ ಶಸ್ತ್ರಾಸ್ತ್ರ ಸಂಗ್ರಹವೂ ಕಡಿಮೆಯಾಗುತ್ತಿದೆ. ಶಸ್ತ್ರಾಸ್ತ್ರ ಮರು ಪೂರೈಕೆಗೆ ಸ್ವಲ್ಪ ಸಮಯ ಬೇಕಾಗಿದೆ. ಈ ವರ್ಷದ ಅಂತ್ಯದವರೆಗೂ ಪ್ರತಿದಾಳಿ ನಡೆಸಲು ಸಾಧ್ಯವಾಗದೇ ಇರಬಹುದು ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಉಕ್ರೇನ್ ನಗರ ಹಾಗೂ ಹಳ್ಳಿಗಳನ್ನು ನೆಲಸಮಗೊಳಿಸುವ ತಂತ್ರಗಾರಿಕೆಗೆ ರಷ್ಯಾ ಮುಂದಾಗಿದೆ. ರಷ್ಯಾದ ಶಕ್ತಿಶಾಲಿ ಗ್ಲೈಡ್ ಬಾಂಬ್‌ಗಳು ಕಟ್ಟಡಗಳನ್ನು ಧ್ವಂಸಗೊಳಿಸುತ್ತಿವೆ. ಉಕ್ರೇನ್ ನಗರಗಳಲ್ಲಿ ರಕ್ಷಣೆ ಮಾಡಿಕೊಳ್ಳುವುದಕ್ಕೆ ಏನೊಂದೂ ಇರಬಾರದು ಎಂಬ ಉದ್ದೇಶದಿಂದ ದಾಳಿ ನಡೆಸಲಾಗುತ್ತಿದೆ.

ಆದರೂ, ಉಕ್ರೇನ್ ಇತ್ತೀಚಿನ ತಿಂಗಳುಗಳಲ್ಲಿ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಿಕೊಂಡಿದೆ. ಹೀಗಾಗಿಯೇ ಇತ್ತೀಚಿನ ತಿಂಗಳುಗಳಲ್ಲಿ ರಷ್ಯಾ ಹೆಚ್ಚು ಮುನ್ನಡೆ ಗಳಿಸಲು ಸಾಧ್ಯವಾಗುತ್ತಿಲ್ಲ ಎಂದು ವಿಶ್ಲೇಷಕರು ಹೇಳಿದ್ದಾರೆ.

ತನ್ನ ಸೈನಿಕ ಬಲ ಹೆಚ್ಚಿಸಿಕೊಳ್ಳುವ ಸಲುವಾಗಿ ಉಕ್ರೇನ್ ಕಳೆದ ಏಪ್ರಿಲ್ ತಿಂಗಳಲ್ಲಿ ಕಡ್ಡಾಯ ಸೈನ್ಯ ಸೇರ್ಪಡೆ ನಿಯಮವನ್ನು ಜಾರಿಗೆ ತಂದಿತ್ತು. ಈ ಅಭಿಯಾನ ಉತ್ತಮವಾಗಿ ಸಾಗುತ್ತಿದೆ ಎಂದು ಜೆಲೆನ್‌ಸ್ಕಿ ಹೇಳಿದ್ದಾರೆ.

ಉಕ್ರೇನ್‌ನ ದೀರ್ಘಾವಧಿ ರಕ್ಷಣಾ ನೆರವು ಹಾಗೂ ಸೈನಿಕ ತರಬೇತಿಗೆ ನ್ಯಾಟೋ ದೇಶಗಳು ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ. ಸ್ಟಿಂಜರ್ ಕ್ಷಿಪಣಿಗಳನ್ನು ರವಾನಿಸಲು ನ್ಯಾಟೋ ದೇಶಗಳು ಇತ್ತೀಚೆಗೆ ನಿರ್ಧರಿಸಿದ್ದವು.

ಯುರೋಪ್ ದೇಶಗಳು ಎಫ್-16 ಸಮರ ವಿಮಾನಗಳನ್ನು ರವಾನಿಸುತ್ತಿವೆ. ಇಷ್ಟಾದರೂ, ಜೆಲೆನ್‌ಸ್ಕಿ ಹತಾಶೆಯಲ್ಲಿದ್ದಾರೆ. ರಷ್ಯಾದ ಮೇಲೆ ನಡೆಸಲಾಗುವ ದಾಳಿಗಳಿಗೆ ಬಳಸುವ ಶಸ್ತ್ರಗಳ ಮೇಲಿನ ಮಿತಿಯನ್ನು ಅಮೆರಿಕ ತೆರವುಗೊಳಿಸದೇ ಹೋದರೆ, ಮುನ್ನಡೆ ಸಾಧ್ಯವಾಗದು ಎಂದವರು ಹೇಳಿದ್ದಾರೆ.

# ಹವಾಮಾನ: ಬೆಳೆ ವಿಮೆ ಪಡೆಯಲು ಸಮೀಕ್ಷೆಯೇ ತೊಡಕು

**ಜಿ.ಜಗದೀಶ್, ಮಾಯಕೊಂಡ**

ಬೆಂಬಿಡದೇ ಕಾಡುವ ಪ್ರತಿಕೂಲ ಹವಾಮಾನದಿಂದ ರಕ್ಷಣೆ ಪಡೆಯಲು ಹವಾಮಾನ ಆಧಾರಿತ ವಿಮೆ ಸೌಲಭ್ಯ ಪಡೆಯಲು ಮುಂದಾದ ರೈತರು ತೀವ್ರ ನಿರಾಶೆ ಅನುಭವಿಸಿದ್ದಾರೆ. ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆ ಮತ್ತು ವಿಮಾ ಕಂಪೆನಿಯ ನಿರ್ಲಕ್ಷ್ಯದಿಂದ ರೈತರು ವಿಮಾ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅನ್ನದಾತರು ತಾವು ಮಾಡದ ತಪ್ಪಿಗೆ, ತೊಂದರೆಗೀಡಾಗಿದ್ದಾರೆ.

ವಾಡಿಕೆ, ಸರಾಸರಿಗಿಂತ ಹೆಚ್ಚು, ಅಥವಾ ಕಡಿಮೆ ಮಳೆ, ಬಿಸಿಲು, ಹಿಮ, ಗಾಳಿಯಿಂದ ಬೆಳೆ ನಷ್ಟವಾದರೆ, ಹವಾಮಾನ ಆಧಾರಿತ ಬೆಳೆವಿಮೆ ರೈತರಿಗೆ ನೆರವಾಗುತ್ತದೆ. ದಾವಣಗೆರೆ ತಾಲ್ಲೂಕಿನಲ್ಲಿ ಅಡಿಕೆ, ದಾಳಿಂಬೆ, ವೀಳ್ಯದೆಲೆಗೆ ಹವಾಮಾನ ಆಧಾರಿತ ಬೆಳೆ ವಿಮೆಗೆ ಅವಕಾಶ ಕಲ್ಪಿಸಲಾಗಿತ್ತು.

ಅಡಿಕೆ ಗರಿಷ್ಠ ಪ್ರಮಾಣದ ನಷ್ಟಕ್ಕೀಡಾದಲ್ಲಿ ಹೆಕ್ಟೇರ್ ಒಂದಕ್ಕೆ 1,28,000 ರೂ. ವರೆಗೆ ಪರಿಹಾರ ನೀಡುವುದಾಗಿ ವಿಮಾ ಕಂಪೆನಿ ಘೋಷಿಸಿತ್ತು. 2022ರಲ್ಲಿ ವಿಮೆ ಮಾಡಿದ ರೈತರಿಗೆ ಉತ್ತಮ ಪರಿಹಾರವೂ ದೊರಕಿ ಆಸರೆಯಾಗಿತ್ತು.

ಈ ವರ್ಷ ಅಡಿಕೆಗೆ ಪ್ರತೀ ಗುಂಟೆಗೆ 64 ರೂ. ರಂತೆ ಕಂತು ತುಂಬಬೇಕಿತ್ತು. ಕಂತು ಪಾವತಿಗೆ ಜುಲೈ 15 ಕೊನೆಯ ದಿನವಾಗಿತ್ತು. ಹಾಗೂ ಹೀಗೂ ಕಂತಿನ ಹಣ ಜೋಡಿಸಿಕೊಂಡು ವಿಮೆ ಆಸರೆ ಪಡೆಯ ಹೊರಟ ರೈತರಿಗೆ ಹಲವಾರು ಸಮಸ್ಯೆಗಳು ಬಾಧಿಸಿದವು. ಬೆಳೆ ಸಮೀಕ್ಷೆಯ ಲೋಪಗಳು ರೈತರನ್ನು ಕಂಗಾಲಾಗಿಸಿವೆ.

**ದೋಷಪೂರಿತ ಸಮೀಕ್ಷೆ, ಹೇಳೋರು, ಕೇಳೋರು ಇಲ್ಲ**

2023ನೇ ವರ್ಷ ಪಹಣಿಯಲ್ಲಿ ನಮೂದಿಸಿದ ಬೆಳೆ ಆಧರಿಸಿ, 2024ನೇ ಸಾಲಿಗೆ ವಿಮೆ ಮಾಡಲಾಗುತ್ತದೆ. ಕಂದಾಯ ಇಲಾಖೆ ಕಳೆದ ವರ್ಷ ಬೇಕಾಬಿಟ್ಟಿಯಾಗಿ ಬೆಳೆ ಸಮೀಕ್ಷೆ ನಡೆಸಿದೆ. ಅಡಿಕೆ ತೋಟವಿದ್ದರೂ, ಮೆಕ್ಕೆಜೋಳ ಎಂದು ನಮೂದಿಸಿದ್ದಾರೆ. ಬೇರೆ ಯಾವುದೋ ಹೊಲದಲ್ಲಿ ನಿಂತು ಫೋಟೋ ತೆಗೆದು ಅಪ್ಲೋಡ್ ಮಾಡಿದ್ದಾರೆ. ನಮಗೆ ಅಂತರ್ಜಾಲ, ಮೊಬೈಲ್ ಜ್ಞಾನವಿಲ್ಲದ್ದರಿಂದ ಅದು ಗೊತ್ತಾಗಲಿಲ್ಲ. ಅಡಿಕೆಗೆ ವಿಮೆ ಕಂತು ಪಾವತಿಸಲು ಹೋದರೆ, ನಿಮ್ಮ ಹೊಲದ ಸಮೀಕ್ಷೆಯಲ್ಲಿ ಅಡಿಕೆ ಅಪ್ಲೋಡ್ ಮಾಡದ ಕಾರಣ ಅಡಿಕೆ ವಿಮೆ ಕಂತು ಸ್ವೀಕರಿಸಲು ಬರುವುದಿಲ್ಲ ಎಂದು ಹಿಂದಕ್ಕೆ ಕಳಿಸಿದರು ಎಂದು ರೈತರು ನೊಂದು ಕೊಳ್ಳುತ್ತಿದ್ದಾರೆ.

**ನಾವಲ್ಲ, ನಾವೂ ಅಲ್ಲ :** ಸಮಸ್ಯೆ ಸರಿಪಡಿಸಲು ಕೃಷಿ ಇಲಾಖೆ ಅಧಿಕಾರಿಗಳನ್ನು ವಿಚಾರಿಸಿದರೆ, ತೋಟಗಾರಿಕೆ ಅಧಿಕಾರಿಗಳನ್ನು ವಿಚಾರಿಸುವಂತೆ ಹೇಳಿ ಕಛೇರಿಯಿಂದ ಸಾಗು ಹಾಕುತ್ತಾರೆ. ನಾವೇನು ಮಾಡ ಲಾಗುವುದಿಲ್ಲ. ಎಲ್ಲಾ ಸಾಫ್ಟ್‌ವೇರ್ ಫೀಡಿಂಗ್ ಆಗಿದೆ. ನಾವೆಲ್ಲಾ ಸಮೀಕ್ಷೆ ಮಾಡಿದ್ದು, ಕಂದಾಯ ಇಲಾಖೆ ಬೆಳೆ ಸಮೀಕ್ಷೆ ನಡೆಸಿದ್ದು, ಅಲ್ಲಿ ವಿಚಾರಿಸಲು ಹೇಳುತ್ತಾರೆ. ಕಂದಾಯ ಇಲಾಖೆ ಸಿಬ್ಬಂದಿ ಮಾಡಿದ ಯಡವಟ್ಟಿನಿಂದ ನಮಗಂತೂ ದಿಕ್ಕೇ ತೋಚದಂ ತಾಗಿದೆ ಎಂದು ಸಿದ್ದನೂರು ಈರಣ್ಣ, ಆನಗೋಡು ಬಸವರಾಜಪ್ಪ ಅಲವತ್ತುಕೊಳ್ಳುತ್ತಾರೆ.

ಕಂದಾಯ ಇಲಾಖೆ ಅನಧಿಕೃತ ವ್ಯಕ್ತಿಗಳಿಂದ ಸಮೀಕ್ಷೆ ಮಾಡಿಸಿದ್ದರೂ ಮೇಲ್ಪಟ್ಟವರು ಪರಿಶೀಲಸದೇ ಅನುಮೋದಿಸಿ ದ್ದಕ್ಕೇ ಹೀಗಾಗಿದೆ ಎಂದು ಕೆಲವರು ದೂರುತ್ತಾರೆ. ಜಿಲ್ಲಾಡಳಿತ ಇದರ ಬಗ್ಗೆ ಜಾಗೃತಿ ವಹಿಸಿ ಸರಿಪಡಿಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎನ್ನುತ್ತಾರೆ ರೈತ ಮುಖಂಡ ಮಲ್ಲಾಪುರ ದೇವರಾಜ್, ಹುಚ್ಚವನಹಳ್ಳಿ ಗಣೇಶ್, ಅಣಬೇರು ಅನಿಲ್ ಕುಮಾರ್.



ಬೇಕಾಬಿಟ್ಟಿ ಬೆಳೆ ಸಮೀಕ್ಷೆ, ರೈತರಿಗೆ ಸಿಗದ ವಿಮೆ ಆಸರೆ

## ಕಂದಾಯ ಇಲಾಖೆ ನಿರ್ಲಕ್ಷ್ಯ ಸಮಸ್ಯೆಗೆ ಕಾರಣ ?

'ಕಂದಾಯ ಇಲಾಖೆಯವರು ಗ್ರಾಮ ಲೆಕ್ಕಾಧಿಕಾರಿಗಳಿಂದ ಬೆಳೆ ಸಮೀಕ್ಷೆ ಮಾಡಿಸದೇ ಖಾಸಗಿಯವರಿಗೆ ಪಹಣಿಯೊಂದಕ್ಕೆ 10 ರೂ.ನಂತೆ ಕೊಟ್ಟು ಸಮೀಕ್ಷೆ ನಡೆಸಿದ್ದಾರೆ. ಅವರು ಸರಿಯಾಗಿ ಸಮೀಕ್ಷೆ ಮಾಡದೇ ಮನಸೋ ಇಚ್ಛೆ, ಬೇಕಾಬಿಟ್ಟಿಯಾಗಿ ಸಮೀಕ್ಷೆ ಮಾಡಿ, ಅಪ್ಲೋಡ್ ಮಾಡಿರುವುದರಿಂದ ಸಮಸ್ಯೆಯುಂಟಾಗಿದೆ. ಅಡಿಕೆ ತೋಟವಿದ್ದರೂ ಕೂಡಾ ಮೆಕ್ಕೆಜೋಳ, ಮತ್ತಿತರ ಅಡಿಕೆ ಮಿಶ್ರ ಬೆಳೆ ಇದ್ದರೂ ಪಾಳುಭೂಮಿ ಎಂದು ನಮೂದಿಸಿ ಎಡವಟ್ಟು ಮಾಡಿದ್ದಾರೆ. ಇದ್ಕಕೆ ಯಾರನ್ನು ಕೇಳಬೇಕು ಎಂಬುದೇ ಗೊತ್ತಾಗುತ್ತಿಲ್ಲ. ಅಧಿಕಾರಿಗಳು ಈ ರೀತಿ, ಮಾಡಿದವರ ಮೇಲೆ ಕಾನೂನು ಕ್ರಮ ಜರುಗಿಸಿಸಬೇಕು, ಇಲ್ಲವಾದರೆ ಬೀದಿಗಿಳಿದು ಹೋರಾಡುತ್ತೇವೆ.

**- ಭೀಮಣ್ಣ, ಜಿಲ್ಲಾ ರೈತ ಮುಖಂಡರು,**
ಆನಗೋಡು

## ರೈತರೇ ಬೆಳೆ ಸಮೀಕ್ಷೆ ಮಾಡಬಹುದು

ಕಳೆದ ವರ್ಷ ಫೀಡ್ ಮಾಡಿದ ಬೆಳೆಗೆ ಈ ವರ್ಷ ವಿಮೆ ಮಾಡಲಾಗುತ್ತಿದೆ. 2024ರ ಸಾಲಿಗೆ ರೈತರಿಗೆ ಬೆಳೆ ಸಮೀಕ್ಷೆ ಮಾಡಲು ಅವಕಾಶ ಕಲ್ಪಿಸಿದೆ. ರೈತರು ಆ್ಯಪ್ ಡೌನ್ ಲೋಡ್ ಮಾಡಿಕೊಂಡು, ತಾವೇ ತಮ್ಮ ಜಮೀನಿನ ಬೆಳೆ ಫೋಟೋ ತೆಗೆದು ಅಪ್ಲೋಡ್ ಮಾಡಬಹುದು. ರೈತರೆಲ್ಲರೂ ಇದನ್ನೇ ಬಳಸಿಕೊಂಡರೆ ಸಮಸ್ಯೆ ನೀಗಬಹುದು.

**- ರೇಷ್ಮಾ ಬಾನು**
ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ದಾವಣಗೆರೆ ತಾಲ್ಲೂಕು.

# ಮೊಹರಂ : ಆಯುಧ ಚುಚ್ಚಿಕೊಂಡು ಭಕ್ತಿಯ ಪರಾಕಾಷ್ಠೆ ಮೆರೆದ ಭಕ್ತರು



**ಹರಿಹರ**

ಹರಿಹರ, ಜು. 17 - ಮೊಹರಂ ಹಬ್ಬದ ಅಂಗವಾಗಿ ಮುಸ್ಲಿಂ ಧರ್ಮದ ಶಿಯಾ ಪಂಗಡದವರು ಇಂದು ನಗರದಲ್ಲಿ ಬೃಹತ್ ಮೆರ ವಣಿಗೆ ನಡೆಸಿದರು.

ಟಿಪ್ಪು ನಗರದ ಅಂಜುಮನ್ ಜಹೇರಾ ಸಲಾಮುಲ್ಲಾ ಅಲೇಖಾನ ಮದರಾಸ ದರ್ಗಾ ದಲ್ಲಿ ದೇವರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸುವ ಮೂಲಕ ಮಧ್ಯಾಹ್ನ ಮೆರವಣಿಗೆ ಆರಂಭ ಮಾಡಿದರು.

ಮೆರವಣಿಗೆ ಟಿಪ್ಪು ನಗರದಿಂದ ಆರಂಭಗೊಂಡು, ಹರ್ಲಾಪುರ ಬಡಾವಣೆ, ಹರಪನಹಳ್ಳಿ ರಸ್ತೆ, ಗಾಂಧಿ ವೃತ್ತ, ಹಳೆ ಪಿ.ಬಿ. ರಸ್ತೆಯ ಮೂಲಕ ಸಂಚರಿಸಿ ತುಂಗ ಭದ್ರಾ ನದಿಗೆ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಯುವಕರು ತಮ್ಮ ದೇಹಕ್ಕೆ ಬ್ಲೇಡ್ ಸೇರಿದಂತೆ ಇತರೆ ಕಬ್ಬಿಣದ ಆಯುಧ ಗಳನ್ನು ಚುಚ್ಚಿಕೊಂಡು ಭಕ್ತಿಯ ಪರಾಕಾಷ್ಠೆ ಮೆರೆದು ನಂತರ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿದರು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಕೌಸರ್ ಅಲಿ, ಕಾರ್ಯದರ್ಶಿ ಮೌಸಿನ್ ಖಾನ್, ಮಾಲಾನಾ, ಅಬ್ಜರ್, ಅಬ್ಬಾಸ್, ಸೈಯದ್ ಅತಿಕ್, ಸಾಲೆಬ್ ಖಾನ್, ಬಾಬಾ ಖಾನ್ ಇತರರು ಹಾಜರಿದ್ದರು.

# ವಿಶೇಷಚೇತನರಿಗೆ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜು. 17 - ಜಿಲ್ಲಾ ಪಂಚಾಯತ್ ಅನಿರ್ಬಂಧಿತ ಅನುದಾನದಡಿ ಶ್ರವಣದೋಷವುಳ್ಳ ವ್ಯಕ್ತಿಗಳು ಸ್ವಯಂ ಉದ್ಯೋಗ ನಡೆಸಲು ಹೊಲಿಗೆ ಯಂತ್ರ 80, ಟಾಕಿಂಗ್ ಲ್ಯಾಪ್‌ಟಾಪ್ 1, ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ಮಾರ್ಟ್ ಫೋನ್ 2 ಮತ್ತು ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ನೀಡಲು ಅರ್ಹ ವಿಕಲಚೇತನ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಂಯೋಜಕರಾದ ನಾಗರಾಜ್ ಡಿಳ್ಳೆಪ್ಪನವರ್ 9901738353, ಶೈಲಜಾ ಕೆ.ಎಂ.9482158005 ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಹೊನ್ನಾಳಿ, ಕೆ. ಸುಬ್ರಮಣ್ಯಂ 9945738141 ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಚನ್ನಗಿರಿ, ಎಂ.ಕೆ.ಶಿವನಗೌಡ 9902105734 ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಜಗಳೂರು, ಶಶಿಕಲಾ ಟಿ. 9945458058, ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಹರಿಹರ, ಚನ್ನಪ್ಪ. ಬಿ 9590829024 ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ದಾವಣಗೆರೆ ಇವರುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಶಾಲಾ ಮಕ್ಕಳ ನಾಟಕೋತ್ಸವ

ವೃತ್ತಿ ರಂಗಭೂಮಿ ರಂಗಾಯಣ, ಬಾಪೂಜಿ ವಿದ್ಯಾ ಸಂಸ್ಥೆ ಮತ್ತು ಎಸ್.ಎಸ್.ಕೇರ್ ಟ್ರಸ್ಟ್‌ನಿಂದ ಶಾಲಾ ಮಕ್ಕಳಿಗಾಗಿ ಜೆ.ಜೆ.ಎಂ ಮೆಡಿಕಲ್ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ಇಂದಿನಿಂದ ಮೂರು ದಿನ ಶಾಲಾ ಮಕ್ಕಳ ನಾಟಕೋತ್ಸವ ಕಾರ್ಯಕ್ರಮ ನಡೆಯಲಿವೆ.

ಇಂದು ಬೆಳಗ್ಗೆ 10ಕ್ಕೆ ಮಕ್ಕಳ ರಾಮಾಯಣ, ನಾಳೆ ಶುಕ್ರವಾರ ಕರ್ಣ-ಅರ್ಜುನರ ಕಾಳಗ, ನಾಡಿದ್ದು ದಿನಾಂಕ 20ರ ಬೆಳಗ್ಗೆ 9ಕ್ಕೆ 'ಸಿರಿಧಾನ್ಯವೇ ಸರಿಧಾನ್ಯ' ಪ್ರದರ್ಶನ ಏರ್ಪಡಿಸಲಾಗಿದೆ. ನಾಟಕ ಪ್ರದರ್ಶನ ಶಾಲಾ ಮಕ್ಕಳಿಗೆ ಉಚಿತವಾಗಿರುತ್ತದೆ.

# 22ರಂದು ನಗರದಲ್ಲಿ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಸಭೆ

ದಾವಣಗೆರೆ, ಜು.17 - ಭದ್ರಾ ಆಣೆಕಟ್ಟಿನಿಂದ ಅಚ್ಚುಕಟ್ಟು ಪ್ರದೇಶಗಳಿಗೆ ಮಳೆಗಾಲದ ಬೆಳೆಗೆ ನೀರು ಹರಿಸುವ ಬಗ್ಗೆ ಸಭೆಯನ್ನು ಇದೇ ದಿನಾಂಕ 22ರ ಸೋಮವಾರ ಮಧ್ಯಾ ಹ್ನ 12.30ಕ್ಕೆ ನಗರದ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣ ದಲ್ಲಿ ಕರೆಯಲಾಗಿದೆ. ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಗೆ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರು ಭಾಗವಹಿಸುವಂತೆ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜ್ ಕೋರಿದ್ದಾರೆ.

# ಪರಿಶಿಷ್ಟರ ಮಕ್ಕಳ ಪ್ರೋತ್ಸಾಹ ಧನಕ್ಕೆ ಕತ್ತರಿ

**ಎಐಡಿಎಸ್‌ಓ ಖಂಡನೆ**

ದಾವಣಗೆರೆ, ಜು.17 - ರಾಜ್ಯ ಸರ್ಕಾರ ನೀಡುತ್ತಿದ್ದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಪ್ರೋತ್ಸಾಹ ಧನಕ್ಕೆ ಕತ್ತರಿ ಹಾಕುವ ಮೂಲಕ ರಾಜ್ಯ ಸರ್ಕಾರ ಬಡ ವಿದ್ಯಾರ್ಥಿಗಳ ಬೆನ್ನಿಗೆ ಚೂರಿ ಹಾಕಿದೆ ಎಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಟೀಕಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿದ್ಯಾರ್ಥಿಗಳಿಗೆ ಬರಬೇಕಾದ ಪ್ರೋತ್ಸಾಹ ಧನ ಸಹ ಬರುತ್ತಿಲ್ಲ. ಇಂತಹ ಸಂದರ್ಭದಲ್ಲಿ ಮೊದಲ ಪ್ರಯತ್ನದಲ್ಲಿ ಎಸ್‌ಎಸ್‌ಎಲ್‌ಸಿ ಪ್ರಥಮ ದರ್ಜೆಯಲ್ಲಿ ಪಾಸ್ ಆದ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲು 6 ಲಕ್ಷ ಆದಾಯ ಮಿತಿಯ ಷರತ್ತು ಹೇರಿರುವುದನ್ನು ಎಐಡಿಎಸ್‌ಓ ಖಂಡಿಸುತ್ತದೆ ಎಂದಿದ್ದಾರೆ. ಸರ್ಕಾರ ಒಂದೆಡೆ ಗ್ಯಾರಂಟಿ ಯೋಜನೆಗಳಿಗೆ ಎಸ್ಸಿ, ಎಸ್ಟಿ ವಿದ್ಯಾರ್ಥಿಗಳ ನಿಧಿಯನ್ನು ಬಳಸಿ, ಇನ್ನೊಂದೆಡೆ ವಿದ್ಯಾರ್ಥಿಗಳ ವೇತನವನ್ನು ಕಿತ್ತು ಕೊಳ್ಳುತ್ತಿದೆ. ಇದು ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಕುರಿತು ರಾಜ್ಯ ಸರ್ಕಾರಕ್ಕಿರುವ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಈ ಕೂಡಲೇ ಸರ್ಕಾರ ನೀಡುತ್ತಿದ್ದ ಅಲ್ಪ ಮೊತ್ತದ ಪ್ರೋತ್ಸಾಹ ಧನವನ್ನು ಮುಂದು ವರೆಸಬೇಕೆಂದು ಆಗ್ರಹಿಸಿದ್ದಾರೆ ಎಂದು ಜಿಲ್ಲಾ ಸಮಿತಿ ಕಾರ್ಯದರ್ಶಿ ಟಿ.ಎಸ್.ಸುಮನ್ ತಿಳಿಸಿದ್ದಾರೆ.

# ಭದ್ರಾ ಜಲಾಶಯ : ಶೀಘ್ರ ಐಸಿಸಿ ಸಭೆ ಕರೆಯಲು ಜಿಲ್ಲಾ ಬಿಜೆಪಿ ರೈತ ಮೋರ್ಚಾದ ನಿಯೋಗ ಆಗ್ರಹ



ದಾವಣಗೆರೆ, ಜು.17 - ಜಿಲ್ಲೆಯ ರೈತರ ಜೀವನಾಡಿಯಾಗಿರುವ ಭದ್ರಾ ಜಲಾಶಯದ ಜಲಾನಯನ ಪ್ರದೇಶದಲ್ಲಿ ಪುನರ್ವಸು ಮಳೆ ಪುರುಸೊತ್ತು ಇಲ್ಲದೇ ಸುರಿಯುತ್ತಿದೆ. ಒಳಹರಿವಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದರಿಂದ ರೈತರಲ್ಲಿ ಮಂದಹಾಸ ಮೂಡಿದ್ದು, ಕಳೆದ ಬೇಸಿಗೆ ಹಂಗಾಮಿನಲ್ಲಿ ಭೀಕರ ಬಿಸಿಲಿನ ತಾಪಮಾನದಿಂದ ಬಸವಳಿದ ರೈತರು, ಪ್ರಸ್ತುತ ಹಂಗಾಮಿನಲ್ಲಿ ಉತ್ತಮ ಮಳೆಯಾಗಿದ್ದರಿಂದ ಜಮೀನು ಉಳುಮೆ ಮಾಡಿಕೊಂಡು ಭತ್ತದ ಬೀಜ ಬಿತ್ತನೆಗೆ ಸಜ್ಜಾಗಿ ಡ್ಯಾಂನ ಒಳಹರಿವಿನ ಪ್ರಮಾಣವನ್ನು ಜಾತಕ ಪಕ್ಷಿಯಂತೆ ನೋಡುತ್ತಿದ್ದಾರೆ ಎಂದು ಜಿಲ್ಲಾ ಬಿಜೆಪಿ ರೈತ ಮೋರ್ಚಾವು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಅವರನ್ನು ನಿನ್ನೆ ಭೇಟಿ ಮಾಡಿ ಮನವಿ ಸಲ್ಲಿಸಿತು.

ಪ್ರಸ್ತುತ ದಿನದಲ್ಲಿ ಭದ್ರಾ ಡ್ಯಾಂನ ಒಳಹರಿವು 27839 ಕ್ಯೂಸೆಕ್ ಇದ್ದು, ನೀರಿನ ಮಟ್ಟ 144 ಅಡಿ 7 ಇಂಚು ಇದೆ. 30.142 ಟಿಎಂಸಿ ಯಷ್ಟು ನೀರಿನ ಸಂಗ್ರಹ ಇದೆ. ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುತ್ತದೆ. ಹೀಗಾಗಿ ಈ ಸಲ ಭದ್ರಾ ಡ್ಯಾಂ ತುಂಬುತ್ತದೆ ಎಂದು ರೈತರಲ್ಲಿ ಭರವಸೆ ಮೂಡಿದೆ. ಇದರಿಂದ ದಾವಣಗೆರೆ ಜಿಲ್ಲೆಯಲ್ಲಿ 65847 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲು ಅಣಿಯಾಗುತ್ತಿದ್ದಾರೆ ಎಂದು ಜಿಲ್ಲಾಧಿಕಾರಿಗೆ ತಿಳಿಸಿದರು.

ತಕ್ಷಣ ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ನಡೆಸಬೇಕು. ಭದ್ರಾ ಡ್ಯಾಂನಲ್ಲಿ ನೀರಿನ ಲಭ್ಯತೆಗೆ ಅನುಸಾರವಾಗಿ ನೀರು ಬಿಡುವ ನಿರ್ಧಾರ ಮಾಡಬೇಕು. ಸ್ಲೂಯಿಸ್ ಗೇಟ್ ಮೂಲಕ ನೀರು ಸೋರಿಕೆಯಾಗುತ್ತಿದೆ. ಸೋರಿಕೆ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕು. ಸ್ಲೂಯಿಸ್ ಭದ್ರತೆ ಬಗ್ಗೆ ಸ್ಪಷ್ಟನೆ ನೀಡಬೇಕು. ಹಳೆಯದಾಗಿರುವ ಡ್ಯಾಂ ಗೇಟ್‌ಗಳನ್ನು ಸರಿಪಡಿಸಿ, ಗಟ್ಟಿಗೊಳಿಸಬೇಕು ಹಾಗೂ ಜರ್ಮನ್ ತಂತ್ರಜ್ಞಾನದಡಿ ಸಿದ್ಧಪಡಿಸಿರುವ ಡ್ಯಾಂ ನಿರ್ವಹಣೆಯ ಕ್ರೇನ್‌ಗಳನ್ನು ರೀ ಕಂಡೀಷನ್ ಮಾಡಿಸಬೇಕೆಂದು ಹೀಗೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಅವರು, ರೈತರ ಕುಂದು - ಕೊರತೆಗಳನ್ನು ಸಮಾಧಾನದಿಂದ ಆಲಿಸಿದರು.

ಶಿವಮೊಗ್ಗ ಜಿಲ್ಲಾಧಿಕಾರಿ ಮತ್ತು ಐಸಿಸಿ ಅಧ್ಯಕ್ಷರೂ ಆದ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರನ್ನು ಸಂಪರ್ಕ ಮಾಡಿ, ಶೀಘ್ರ ಐಸಿಸಿ ಸಭೆ ಕರೆಯಲು ಆಗ್ರಹಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಈ ಹಂಗಾಮಿನಲ್ಲಿ ದಾವಣಗೆರೆ ಜಿಲ್ಲೆಯ ರೈತರು ಭತ್ತ ಬೆಳೆಯಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ರೈತರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರೈತ ಮೋರ್ಚಾ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಜಿಲ್ಲಾ ಬಿಜೆಪಿ ವಕ್ತಾರ ಕೊಳೇನಹಳ್ಳಿ ಬಿ.ಎಂ.ಸತೀಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೇಬಾಳ್, ಮಾಜಿ ಮೇಯರ್ ಹೆಚ್.ಎನ್.ಗುರುನಾಥ್, ಮಾಜಿ ಎಪಿಎಂಸಿ ಅಧ್ಯಕ್ಷ ಕುಂದುವಾಡ ಗಣೇಶಪ್ಪ, ವಾಟರ್ ಮಂಜುನಾಥ, ಮತ್ತಿ ಪಿ.ಎಂ.ಮಂಜುನಾಥ, ಹೂವಿನಮಡು ಪ್ರಭು, ಮತ್ತೇರ ರೇವಣಸಿದ್ದಪ್ಪ, ಹೆಚ್.ಜಿ.ಮಂಜಪ್ಪ ಮುಂತಾದವರು ಉಪಸ್ಥಿತರಿದ್ದರು.

# ಅಸ್ಸಾಂನಲ್ಲಿ ಮುಸ್ಲಿಮರ ಜನಸಂಖ್ಯೆ ಶೇ.40ಕ್ಕೆ ಏರಿಕೆ : ಸಿಎಂ ಶರ್ಮಾ

ರಾಂಚಿ, ಜು. 17 – ಅಸ್ಸಾಂನಲ್ಲಿ ಮುಸ್ಲಿಮರ ಜನಸಂಖ್ಯೆ ಪ್ರಮಾಣ ಶೇ. 40 ಕ್ಕೆ ಏರಿಕೆಯಾಗಿದೆ. ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆ ಅಲ್ಲಿ ದೊಡ್ಡ ವಿಷಯವಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ.

ಬಿಜೆಪಿ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನನ್ನ ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ. 40ಕ್ಕೆ ತಲುಪಿದೆ. 1951 ರಲ್ಲಿ ಮುಸ್ಲಿಮರ ಜನಸಂಖ್ಯೆ ಶೇ. 12ರಷ್ಟು ಇತ್ತು. ಇದು ನನಗೆ ರಾಜಕೀಯ ವಿಷಯವಲ್ಲ, ಇದು ನನ್ನ ಜೀವನ್ಮರಣದ ಪ್ರಶ್ನೆ ಹೇಳಿದ್ದಾರೆ.

ಇದಕ್ಕೂ ಮುಂಚೆ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಜಾರ್ಖಂಡ್ ಬುಡಕಟ್ಟು ಪ್ರದೇಶಗಳಲ್ಲಿ ಬಾಂಗ್ಲಾ ದೇಶಿಯರ ನುಸುಳುವಿಕೆ ಹೆಚ್ಚಾಗಿದೆ ಎಂದು ಹೇಳಿದ್ದರು.

ಮುಂಬರುವ ಜಾರ್ಖಂಡ್ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ನುಸುಳುಕೋರರ ತಡೆ ಯೋಜನೆಗೆ ಬಿಜೆಪಿ ಒತ್ತು ನೀಡಲಿದೆ ಎಂದೂ ಶರ್ಮಾ ಹೇಳಿದ್ದರು.

# 33ನೇ ವಾರ್ಡಿನಲ್ಲಿ ವಾಹನ ನಿಲುಗಡೆ ಜಾಗ ಒತ್ತುವರಿ ತೆರವಿಗೆ ಆಗ್ರಹ

ದಾವಣಗೆರೆ, ಜು.17 - ಇಲ್ಲಿನ 33ನೇ ವಾರ್ಡ್‌ನಲ್ಲಿರುವ ಪಾರ್ಕ್ ಪಕ್ಕದ ವಾಹನ ನಿಲುಗಡೆಯ ಜಾಗ ಒತ್ತುವರಿ ಆಗಿರುವುದನ್ನು ಸರಿಪಡಿಸುವಂತೆ ಪಾಲಿಕೆ ಆಯುಕ್ತರಿಗೆ ಪಿ.ರುದ್ರೇಶ್ ಮನವಿ ಮಾಡಿದ್ದಾರೆ.

ಸಾರ್ವಜನಿಕರ ವಿಶ್ರಾಂತಿಗಾಗಿ ಇಲ್ಲಿ ಪಾರ್ಕಿನ ವ್ಯವಸ್ಥೆ ಮಾಡಲಾಗಿದ್ದು, ಪಾರ್ಕಿನ ಪಕ್ಕ ಅಂದಾಜು 20×80 ಅಡಿ ಅಳತೆಯ ಜಾಗವನ್ನು ವಾಹನ ನಿಲುಗಡೆಗೆ ಮೀಸಲಿಟ್ಟಿದ್ದರು. ಆದರೆ ಪ್ರಭಾವಿಯೊಬ್ಬರ ವಿದ್ಯಾಸಂಸ್ಥೆಯು ಈ ಜಾಗವನ್ನು ಆಕ್ರಮಿಸಿ ಗೇಟ್ ನಿರ್ಮಿಸಿದ್ದಾರೆ. ವಿಶ್ರಾಂತಿಗಾಗಿ ಪಾರ್ಕಿಗೆ ಬರುವ ನಾಗರಿಕರು ನಿತ್ಯವೂ ವಾಹನ ನಿಲ್ಲಿಸುವ ಸಮಸ್ಯೆ ಎದುರಿಸುತ್ತಿದ್ದಾರೆ. ಆದ್ದರಿಂದ ಕೂಡಲೇ ಒತ್ತುವರಿಯಾಗಿ ನಿರ್ಮಿತ ಗೇಟ್ ತೆರವುಗೊಳಿಸಿ, ಪಾರ್ಕಿಗೆ ಸಂಬಂಧಿಸಿದ ಈ ಜಾಗವನ್ನು ಸಾರ್ವಜನಿಕರ ವಾಹನ ನಿಲ್ದಾಣಕ್ಕೆ ಅನುಕೂಲ ಮಾಡಿ ಕೊಡುವಂತೆ ಮನವಿ ಮಾಡಿದ್ದಾರೆ.


## ಗೌರವಾನ್ವಿತ ಒಂದನೇ ಹೆಚ್ಚುವರಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ

**ಪಿ ಅಂಡ್ ಎಸ್. ಸಿ ನಂ. 29/2024**

**ಅರ್ಜಿದಾರರು :** ಶ್ರೀ ಸುರೇಶ ಬಿನ್ ಐ. ಚಂದ್ರಶೇಖರಪ್ಪ, ಯಾನೇ ಚಂದ್ರಶೇಖರಪ್ಪ ಯಾನೇ ಇಟಗಿ ಚಂದ್ರಶೇಖರಪ್ಪ, ವಯಸ್ಸು ಸುಮಾರು 53 ವರ್ಷ, ಬಿ ಬ್ಲಾಕ್, ಶೇಖರಪ್ಪ ನಗರ, ದಾವಣಗೆರೆ.

- ವಿರುದ್ಧ - **ಎದುರುದಾರರು :** ಯಾರು ಇಲ್ಲಾ

**ಅರ್ಜಿದಾರರ ಅರ್ಜಿ ಭಾರತೀಯ ಉತ್ತರಾಧಿಕಾರತ್ವ ಅಧಿನಿಯಮ ಕಲಂ.373 (1)(ಬಿ) ರ ಅಡಿಯಲ್ಲಿ ಸಲ್ಲಿಸಲಾಗಿದೆ.**

ಅರ್ಜಿದಾರರ ತಂದೆ ಐ.ಚಂದ್ರಶೇಖರಪ್ಪ ಯಾನೇ ಚಂದ್ರಶೇಖರಪ್ಪ ಯಾನೇ ಇಟಗಿ ಚಂದ್ರಶೇಖರಪ್ಪ ಬಿನ್ ಕೊಟ್ರಪ್ಪ, ದೇವರಬೆಳಕೆರೆ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಆದ ಇವರು ಅರ್ಜಿ ಷೆಡ್ಯೂಲ್ ಜಮೀನನ್ನು ಅವರ ಮಗನಾದ ಅರ್ಜಿದಾರರ ಹೆಸರಿಗೆ ದಾವಣಗೆರೆ ಜಿಲ್ಲಾ, ಹರಿಹರ ತಾಲೂಕು, ಸಬ್ ರಿಜಿಸ್ಟ್ರಾರ್ ಕಚೇರಿಯ 3ನೇ ಪುಸ್ತಕದ ನಂ. HRR-3-00060-2016-17ಆಗಿ ಸಿ.ಡಿ ನಂ. HRRD98ನೇದ್ದರಲ್ಲಿ ದಿನಾಂಕ : 15/06/2016 ರಂದು ವಿಲ್ ಯಾನೇ ಮರಣ ಶಾಸನ ಪತ್ರವನ್ನು ಮಾಡಿಸಿಟ್ಟಿದ್ದು ಇರುತ್ತದೆ. ಅರ್ಜಿದಾರರ ತಂದೆ ಚಂದ್ರಶೇಖರಪ್ಪ ಯಾನೆ ಐ. ಚಂದ್ರಶೇಖರಪ್ಪ ಯಾನೆ ಇಟಗಿ ಚಂದ್ರಶೇಖರಪ್ಪ ಇವರು ದಿನಾಂಕ:31/01/2021 ರಂದು ಮರಣ ಹೊಂದಿರುತ್ತಾರೆ.

ಕಾರಣ ಮೇಲ್ಕಂಡ ಅರ್ಜಿಯ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಪ್ರೊಬೇಟ್ ಆದೇಶ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅರ್ಜಿದಾರರನ್ನು ಬಿಟ್ಟು ಚಂದ್ರಶೇಖರಪ್ಪ ಯಾನೆ ಐ.ಚಂದ್ರಶೇಖರಪ್ಪ ಯಾನೇ ಇಟಗಿ ಚಂದ್ರಶೇಖರಪ್ಪ ಇವರ ವಾರಸುದಾರರು ಯಾರಾದರೂ ಇದ್ದಲ್ಲಿ, ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ: 19/08/2024 ರಂದು ಬೆಳಿಗ್ಗೆ 11-00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲೀ, ಈ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷಿಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ಈ ದಿನ ದಿನಾಂಕ 16-07-2024ರಂದು ಘನ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
**ಶ್ರೀ ಕೆ.ತಿಮ್ಮಪ್ಪ,**
**ಶ್ರೀ ಹೆಚ್.ದಿವಾಕರ್**, ವಕೀಲರು,
ವಿನೋಬನಗರ, ದಾವಣಗೆರೆ.

ಸ್ಥಳ : ದಾವಣಗೆರೆ
ದಿನಾಂಕ : 16/07/2024

ನ್ಯಾಯಾಲಯದ ಆದೇಶದ ಮೇರೆಗೆ
**ಮುಖ್ಯ ಆಡಳಿತಾಧಿಕಾರಿಗಳು,**
**ಘನ ಜಿಲ್ಲಾ ಮತ್ತು**
**ಸತ್ರ ನ್ಯಾಯಾಲಯ, ದಾವಣಗೆರೆ.**

# ನಗರದಲ್ಲಿ ಇಂದು ಸರಕು - ಸೇವಾ ತೆರಿಗೆ ಸೆಮಿನಾರ್

ಜಿಲ್ಲಾ ಪ್ರಾಕ್ಟಿಷನರ್ಸ್ ಅಸೋಸಿಯೇಷನ್ ವತಿಯಿಂದ ಸರಕು ಮತ್ತು ಸೇವಾ ತೆರಿಗೆ ಕುರಿತು ಕಾರ್ಯಾಗಾರವನ್ನು ಚಾರ್ಟರ್ಡ್ ಅಕೌಂಟೆಂಟ್ಸ್ ಭವನದಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಕಾರ್ಯದರ್ಶಿ ಜಿ. ಮಹಾಂತೇಶ್ ತಿಳಿಸಿದ್ದಾರೆ.

ಬೆಳಿಗ್ಗೆ ತಾಂತ್ರಿಕ ಸಭೆಯಲ್ಲಿ 53ನೇ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಬದಲಾವಣೆಗಳು ಮತ್ತು ವೀಕ್ಷಿಸಲು ಸಾಮಾನ್ಯ ದೋಷಗಳು ಕುರಿತು ಶ್ರೀಮತಿ ಅನ್ನಪೂರ್ಣ ಕಬ್ರ ಮಾತನಾಡುವರು. ಎರಡನೇ ತಾಂತ್ರಿಕ ಸಭೆಯಲ್ಲಿ ತೀರ್ಪು ಮತ್ತು ಮೇಲ್ಮನವಿ ಪ್ರಕ್ರಿಯೆಗಳ ತಯಾರಿ ಮತ್ತು ಫೈಲಿಂಗ್ ವಿಷಯದ ಬಗ್ಗೆ ರಾಜೇಶ್ ಕುಮಾರ್ ಟಿ.ಆರ್., ಮತ್ತು ಮೂರನೇ ತಾಂತ್ರಿಕ ಸಭೆಯಲ್ಲಿ ಮೌಲ್ಯಮಾಪನ, ಆಡಿಟ್, ವಿಚಾರಣೆ ಮತ್ತು ತನಿಖೆ ಹೇಗೆ ಎದುರಿಸುವುದು ಎಂದು ಸಿಎ ಜತಿನ್ ಅನಿಲ್ ಕ್ರಿಸ್ಟೋಫರ್ ತಿಳಿಸುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷ ಹೆಚ್.ಟಿ. ಸುಧೀಂದ್ರ ರಾವ್ ವಹಿಸುವರು. ಹಿರಿಯ ಲೆಕ್ಕ ಪರಿಶೋಧಕ ಎ. ಎಸ್. ವೀರಣ್ಣ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಎಸ್. ಮಹಾಂತೇಶ್, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಎಚ್. ವೀರೇಂದ್ರ ಪಾಟೀಲ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಎನ್.ಎಸ್. ನಾಗಸ್ವಾಮಿ, ಕೇಂದ್ರ ತೆರಿಗೆಗಳ ಸಹಾಯಕ ಆಯುಕ್ತ ಸಿ.ತಿರುಮಲೈ ಮುತ್ತು ಅವರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಗೌರವ ಅತಿಥಿಗಳಾಗಿ ಎಸ್. ನಂಜುಂಡಯ್ಯ ಪ್ರಸಾದ್, ಶ್ರೀಧರ ಪಾರ್ಥಸಾರಥಿ, ಉಮೇಶ್ ಶೆಟ್ಟಿ, ಜಂಬಗಿ ರಾಧೇಶ್, ಬೆಂಗಳೂರಿನ ರಾಜೇಶ್ ಕುಮಾರ್ ಟಿ.ಆರ್. ಜತಿನ್ ಅನಿಲ್ ಕ್ರಿಸ್ಟೋಫರ್, ಅನ್ನಪೂರ್ಣ ಕಬ್ರ ಮತ್ತು ಗೌರವಾಧ್ಯಕ್ಷ ಶಂಕರ್ ಡಿ.ಆರ್. ಉಪಾಧ್ಯಕ್ಷ ಸುರೇಶ್ ಎಚ್.ವಿ, ಕಾರ್ಯದರ್ಶಿ ಮಹಾಂತೇಶ್ ಜಿ., ಎನ್.ವಿ. ಶಿವಪ್ರಸನ್ನ ಜಂಟಿ ಕಾರ್ಯದರ್ಶಿ, ಡಿ.ಆರ್. ಬಸವರಾಜ, ಕೋಶಾಧಿಕಾರಿ, ಕೆ.ಸಿ. ನಾಗರಾಜ್ ಅಧ್ಯಯನ ಸಮಿತಿ ಚೇರ್ಮನ್, ಕೆ. ಎಸ್. ಶಿವಕುಮಾರಪ್ಪ ಕಟ್ಟಡ ಸಮಿತಿ ಚೇರ್ಮನ್, ಎಚ್.ವಿ. ಸುರೇಶ್, ಎಂ.ಎಂ. ಬಸವೇಶ್ವರ, ಎಂ.ಸಿ. ಬಸವರಾಜ, ಎಂ.ಎಸ್. ಮೃತ್ಯುಂಜಯ, ಫಯಾಜ್ ಅಹಮದ್, ಬಿ.ಎಂ. ಪ್ರಶಾಂತ್ ಕುಮಾರ್, ಬಿ.ಎನ್. ರೇವಣಸಿದ್ದಪ್ಪ, ಎಸ್.ಪಿ.ಚಂದ್ರು, ಕೆ.ಎಚ್. ಮಹೇಶ್ ಉಪಸ್ಥಿತರಿರುವರು.

# ಬ್ರಾಹ್ಮಣ ಸಮಾಜದಿಂದ ವಿದ್ಯಾರ್ಥಿಗಳಿಗೆ ಪುರಸ್ಕಾರ



ದಾವಣಗೆರೆ, ಜು. 17 - ಬ್ರಾಹ್ಮಣ ಸಮಾಜದ ವತಿಯಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಹೆಚ್ಚು ಅಂಕ ಪಡೆದು ಸಾಧನೆ ಮಾಡಿರುವ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಡಾ. ವೆಂಕಟಗಿರೀಶಾಚಾರ್ಯ ಮಾತನಾಡಿ, ಬ್ರಾಹ್ಮಣ ಸಮಾಜದ ವತಿಯಿಂದ ಸಮಾಜಮುಖಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಜೀವನದಲ್ಲಿ ಪ್ರಾಮಾಣಿಕತೆ ತುಂಬಾ ಅವಶ್ಯಕವಾಗಿದ್ದು, ನಮ್ಮ ನಡೆ-ನುಡಿಯಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಬಹುದು ಹಾಗೂ ತಮ್ಮ ಜೀವನವನ್ನು ಸೊಗಸಾಗಿ ರೂಪಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಶಶಿಕಾಂತ್ ಮಾತನಾಡಿ, ನಮ್ಮ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಅದರ ಮಹತ್ವವನ್ನು ತಿಳಿಸಿ ಮುಂದೆ ಉತ್ತಮ ಸಾಧನೆಗೈದು ತಂದೆ-ತಾಯಿಗಳಿಗೆ, ಗುರು-ಹಿರಿಯರಿಗೆ ಹಾಗೂ ಈ ದೇಶಕ್ಕೆ ಒಳ್ಳೆಯ ಹೆಸರು ಬರುವಂತೆ ನಡೆದುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ನಿಕಟಪೂರ್ವ ಅಧ್ಯಕ್ಷ ಎಸ್.ಪಿ.ಸತ್ಯನಾರಾಯಣರಾವ್, ಗೌರವ ಕಾರ್ಯದರ್ಶಿ ಎಸ್. ಗೋಪಾಲದಾಸ್ ಉಪಸ್ಥಿತರಿದ್ದರು, ರಾಮಚಂದ್ರರಾವ್ ಪರಿಚಯಿಸಿದರು. ಭಾಸ್ಕರ್ ಭಟ್ ಸ್ವಾಗತಿಸಿದರು. ಬಾಲಕೃಷ್ಣ ವೈದ್ಯ ವಂದಿಸಿದರು. ಡಿ. ಶೇಷಾಚಲ, ವಕೀಲರಾದ ರಾಮದಾಸ್, ಶ್ರೀಮತಿ ಅಡಿಗ, ಗೋಪಾಲಕೃಷ್ಣ ಮತ್ತಿತರರು ಭಾಗವಹಿಸಿದ್ದರು.

## ಕಂಪನಿಗಳೇ ಹೊರಕ್ಕೆ : ಎಚ್ಚರಿಕೆ

**(1ನೇ ಪುಟದಿಂದ)** ಮಸೂದೆಯನ್ನು ವಾಪಸ್ ಪಡೆಯಬೇಕು. ವಿಶೇಷವಾಗಿ ಜಾಗತಿಕ ಕಂಪನಿಗಳು ರಾಜ್ಯದಲ್ಲಿ ಹೂಡಿಕೆ ಹೆಚ್ಚಿಸುತ್ತಿರುವ ಇಂತಹ ಸಂದರ್ಭದಲ್ಲಿ ಮಸೂದೆ ಸೂಕ್ತವಲ್ಲ ಎಂದು ನ್ಯಾಸ್ಕಾಂ ಹೇಳಿದೆ.

ಟೆಕ್ ವಲಯ ರಾಜ್ಯ ಜಿಡಿಪಿಗೆ ಶೇಕಡ 25 ರಷ್ಟು ಕೊಡುಗೆ ನೀಡುತ್ತಿದೆ. ರಾಜ್ಯದಲ್ಲಿ 11,000 ನವೋದ್ಯಮಗಳಿವೆ ಹಾಗೂ ಒಟ್ಟು ಜಾಗತಿಕ ಕಂಪನಿಗಳಲ್ಲಿ ಶೇಕಡ 30ರಷ್ಟು ರಾಜ್ಯದಲ್ಲಿವೆ. ಇವುಗಳ ಮೇಲೆ ನಿರ್ಬಂಧ ಹೇರುವುದರಿಂದ ಕಂಪನಿಗಳಿಗೆ ಕುಶಲಿಗಳು ದೊರೆಯುವುದು ಕಷ್ಟವಾಗಲಿದೆ, ಕಂಪನಿಗಳು ಬೇರೆಡೆ ವಲಸೆ ಹೋಗಲಿವೆ ಎಂದು ನ್ಯಾಸ್ಕಾಂ ಎಚ್ಚರಿಸಿದೆ.

ಜಾಗತಿಕವಾಗಿ ಕುಶಲ ಪ್ರತಿಭೆಗಳ ತೀವ್ರ ಕೊರತೆ ಇದೆ. ಕರ್ನಾಟಕದಲ್ಲಿ ಅತಿ ಹೆಚ್ಚು ಪ್ರತಿಭೆಗಳಿದ್ದರೂ ಸಹ, ಈ ಸಮಸ್ಯೆಗೆ ಹೊರತಾಗಿಲ್ಲ ಎಂದು ಔದ್ಯಮಿಕ ಒಕ್ಕೂಟ ಹೇಳಿದೆ.

ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಭೆಗಳನ್ನು ಆಕರ್ಷಿಸಲು ಸಾಧ್ಯವಾಗುವ ಸ್ಥಳಗಳಿಗೆ ಕಂಪನಿಗಳು ತೆರಳುತ್ತವೆ. ಕುಶಲಿಗಳು ಕಂಪನಿಗಳ ಯಶಸ್ಸಿಗೆ ಅನಿವಾರ್ಯ. ವಿಶ್ವದಾದ್ಯಂತ ಇರುವ ಉತ್ತಮ ಪ್ರತಿಭೆಗಳನ್ನು ಸೆಳೆಯುವುದರಿಂದ ರಾಜ್ಯದಲ್ಲಿ ಹೂಡಿಕೆ ಹೆಚ್ಚಿಸಲು ಸಾಧ್ಯವಾಗಲಿದೆ ಎಂದು ನ್ಯಾಸ್ಕಾಂ ಹೇಳಿದೆ.

ಈ ರೀತಿಯ ಮಸೂದೆಗಳಿಂದ ಕೈಗಾರಿಕಾ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಅಲ್ಲದೇ ಉದ್ಯೋಗಗಳ ಮೇಲೆ ಪರಿಣಾಮವಾಗುತ್ತದೆ ಹಾಗೂ ರಾಜ್ಯ ಜಾಗತಿಕವಾಗಿ ಹೊಂದಿರುವ ಹೆಗ್ಗಳಿಕೆ ಮಸುಕಾಗುತ್ತದೆ ಎಂದು ನ್ಯಾಸ್ಕಾಂ ತಿಳಿಸಿದೆ.

## ಅಗ್ನಿವೀರರಿಗೆ ಶೇ.10ರ ಮೀಸಲಾತಿ

**(1ನೇ ಪುಟದಿಂದ)** ಒಂದರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದವರು ಹೇಳಿದ್ದಾರೆ.

ಪೇದೆ, ಗಣಿ ಭದ್ರತೆ, ಅರಣ್ಯ ರಕ್ಷಣೆ, ಜೈಲು ವಾರ್ಡನ್ ಹಾಗೂ ವಿಶೇಷ ಪೊಲೀಸ್ ಅಧಿಕಾರಿಗಳ ರೀತಿಯ ಹುದ್ದೆಗಳ ನೇರ ನೇಮಕಾತಿಯಲ್ಲಿ ಶೇಕಡ 10ರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

## ಮಿಂಚುಳ್ಳಿ ಫಾಲ್ಸ್‌ಗೆ ಜೀವಕಳೆ



ಜಿಟಿಜಿಟಿ ಮಳೆಯಿಂದಾಗಿ ಕೊಮಾರನಹಳ್ಳಿಯ ಗುಡ್ಡಗಾಡು ಪ್ರದೇಶದಲ್ಲಿ ಶಿವಮೊಗ್ಗ ರಸ್ತೆ ಬಳಿ ಇರುವ ಮಿಂಚುಳ್ಳಿ ಜಲಪಾತಕ್ಕೆ ಜೀವ ಕಳೆ ಬಂದಿದ್ದು ಮಳೆ ನೀರು ಕಲ್ಲು ಬಂಡೆ ಮೇಲಿನಿಂದ ಝುರಿ ಝುರಿಯಾಗಿ ದುಮ್ಮಿಕ್ಕುವ ನಯನ ಮನೋಹರ ದೃಶ್ಯ ಎಲ್ಲರ ಗಮನ ಸೆಳೆಯುತ್ತಿದೆ.

**ಚಿತ್ರ : ಜಿಗಳಿ ಪ್ರಕಾಶ್**

# ಕನ್ನಡಿಗರ ಮೀಸಲಾತಿ ವಿಧೇಯಕಕ್ಕೆ ತಡೆ

**(1ನೇ ಪುಟದಿಂದ)** ಈ ಬಗ್ಗೆ ಮತ್ತೊಮ್ಮೆ ಪರಾಮರ್ಶಿಸಿ ನಿರ್ಧರಿಸಲಾಗುವುದು. ಮುಂದಿನ ಸಂಪುಟ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ಕನ್ನಡಿಗರಿಗೆ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಉದ್ದಿಮೆಗಳಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಜಾರಿಗೆ ತರಲು ಉದ್ದೇಶಿಸಿದ್ದ ವಿಧೇಯಕವು ಇನ್ನೂ ಸಿದ್ಧತೆಯ ಹಂತದಲ್ಲಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು ಎಂದಿದ್ದಾರೆ.

ಕರ್ನಾಟಕದ ಖಾಸಗಿ ಕೈಗಾರಿಕೆಗಳು ಮತ್ತಿತರೆ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಿಗೆ ಶೇ. 50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಿಗೆ ಶೇ. 75 ರಷ್ಟು ಮೀಸಲಾತಿ ನಿಗದಿಪಡಿಸುವ ವಿಧೇಯಕಕ್ಕೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಕನ್ನಡಿಗರು ಕನ್ನಡದ ನೆಲದಲ್ಲಿ ಉದ್ಯೋಗ ವಂಚಿತರಾಗುವುದನ್ನು ತಪ್ಪಿಸಿ, ತಾಯ್ನಾಡಿನಲ್ಲಿ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂಬುದು ನಮ್ಮ ಸರ್ಕಾರದ ಆಶಯ. ನಮ್ಮದು ಕನ್ನಡ ಪರವಾದ ಸರ್ಕಾರ. ಕನ್ನಡಿಗರ ಹಿತ ಕಾಯುವುದು ನಮ್ಮ ಆದ್ಯತೆಯಾಗಿದೆ ಎಂದು ಸಿದ್ದರಾಮಯ್ಯ ಮೊದಲು ತಿಳಿಸಿದ್ದರು.

ಸರ್ಕಾರದ ಕ್ರಮವನ್ನು ಉದ್ಯಮಿಗಳಾದ ಟಿ.ವಿ. ಮೋಹನ್ ದಾಸ್ ಪೈ ಸೇರಿದಂತೆ ಹಲವರು ಟೀಕಿಸಿದ್ದರು.

ಸಾಫ್ಟ್‌ವೇರ್ ಉದ್ಯಮಗಳ ಒಕ್ಕೂಟವಾದ ನ್ಯಾಸ್ಕಾಂ ಸರ್ಕಾರದ ನಿರ್ಧಾರಕ್ಕೆ ಆಕ್ಷೇಪಿಸಿ, ಇದರಿಂದ ಜಾಗತಿಕ ಕಂಪನಿಗಳು ರಾಜ್ಯದಿಂದ ನಿರ್ಗಮಿಸಲಿವೆ ಎಂದು ಎಚ್ಚರಿಕೆ ನೀಡಿತ್ತು.

## ಡಿಲೀಟ್, ನಂತರ ತಡೆ

**(1ನೇ ಪುಟದಿಂದ)** ಮೊದಲು ಹೇಳಿಕೆ ನೀಡಿದ್ದ ಸಿದ್ದರಾಮಯ್ಯ, ಸಿ ಮತ್ತು ಡಿ ಶ್ರೇಣಿಯ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇಕಡ ನೂರರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ತಿಳಿಸಿದ್ದರು.

ನಂತರ ಮತ್ತೊಂದು ಹೇಳಿಕೆ ನೀಡಿರುವ ಸಿದ್ದರಾಮಯ್ಯ, ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಲ್ಲಿ ಶೇಕಡ 50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಲ್ಲಿ ಶೇಕಡ 75 ರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ಹೇಳಿದ್ದರು.

ಆದರೆ, ವಿವಾದ ತೀವ್ರವಾದ ನಂತರ ಉಲ್ಟಾ ಹೊಡೆದ ಸಿದ್ದರಾಮಯ್ಯ, ಕನ್ನಡಿಗರಿಗೆ ಖಾಸಗಿ ವಲಯದಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಜಾರಿಗೆ ತರಲು ಉದ್ದೇಶಿಸಿದ್ದ ವಿಧೇಯಕವು ಇನ್ನೂ ಸಿದ್ಧತೆಯ ಹಂತದಲ್ಲಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು ಎಂದಿದ್ದಾರೆ.

## ಪದವೀಧರರಿಗೆ 10 ಸಾವಿರ ರೂ.

**(1ನೇ ಪುಟದಿಂದ)** ಹೊಂದಿರುವವರಿಗೆ 8,000 ರೂ. ಹಾಗೂ ಪದವೀಧರರಿಗೆ 10,000 ರೂಗಳ ಶಿಷ್ಯ ವೇತನ ನೀಡಲಾಗುವುದು ಎಂದವರು ತಿಳಿಸಿದರು.

ತರಬೇತಿ ನಂತರ ಇವರಿಗೆ ಉದ್ಯೋಗ ಒದಗಿಸಲಾಗುವುದು. ಇದರಿಂದ ಕೈಗಾರಿಕೆಗಳಿಗೆ ತರಬೇತಿ ಹೊಂದಿದ ಸಿಬ್ಬಂದಿ ಲಭ್ಯವಾಗಲಿದೆ. ಈ ಯೋಜನೆಯ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ರಾಜ್ಯ ಸರ್ಕಾರ ಇದೇ ಮೊದಲ ಬಾರಿಗೆ ಇಂತಹ ಯೋಜನೆ ರೂಪಿಸುತ್ತಿದೆ ಎಂದು ಶಿಂಧೆ ತಿಳಿಸಿದರು.

## ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮಾರಾಟ ಮೇಳ ಮುಂದುವರಿಕೆ



ದಾವಣಗೆರೆ, ಜು.17 - ಅತಿ ಕಡಿಮೆ ದರದಲ್ಲಿ ರೆಡಿಮೇಡ್ ಉಡುಪುಗಳನ್ನು ನಗರದ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಮಾರಾಟ ಮಾಡಲು ಆಯೋಜಿಸಲಾಗಿದೆ.

ಈ ಮಾರಾಟ ಮೇಳವನ್ನು ಇನ್ನೂ ನಾಲ್ಕು ದಿನಗಳ ಕಾಲ ಮುಂದುವರೆಸಲಾಗಿದೆ.

ಕಂಪನಿಗಳ ಉಡುಪುಗಳು, ಮಕ್ಕಳು, ಯುವಕರು, ವಯೋವೃದ್ಧರು ಹೀಗೆ ಎಲ್ಲಾ ವರ್ಗದವರಿಗೂ ಲಭ್ಯವಿದ್ದು, ರೆಡಿಮೇಡ್ ಗಾರ್ಮೆಂಟ್ಸ್ 149 ರೂ. ನಿಂದ ಪ್ರಾರಂಭವಾಗುತ್ತದೆ.

ಪುರುಷರ ಮತ್ತು ಮಹಿಳೆಯರ ಎಲ್ಲಾ ರೀತಿಯ ಸಿದ್ಧ ಉಡುಪುಗಳು ದೊರೆಯುತ್ತವೆ.

ಪುರುಷರ ಮತ್ತು ಮಹಿಳೆಯರ ಪ್ರತ್ಯೇಕ ಕೌಂಟರ್‌ಗಳು ಲಭ್ಯವಿದೆ. ರಾಜಸ್ಥಾನಿ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್ಸ್, ಪಿಲ್ಲೋ ಕವರ್ಸ್, ಸೋಫಾ ಕವರ್ಸ್ ಇತ್ಯಾದಿಗಳನ್ನು ಬಿಗ್ ಆಫರ್‌ನಲ್ಲಿ ಮಾರಾಟ ಮಾಡಲಾಗುವುದು.

# ಮಕ್ಕಳಿಗೆ ನೋಟ್ ಬುಕ್ ವಿತರಣೆ



**ಮಲೇಬೆನ್ನೂರು**

ಮಲೇಬೆನ್ನೂರು, ಜು. 17 - ಬೆಂಗಳೂರಿನ ಇಂಡಿಯಾ ಸುಧಾರ್ ಟ್ರಸ್ಟ್ ಮತ್ತು ಸಿನೋಪ್ಸಿಸ್ ಫಾರ್ ಗುಡ್ ಸಂಸ್ಥೆಯಿಂದ ನಂದಿತಾವರೆಯ ಬಸವೇಶ್ವರ ಪ್ರೌಢಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಿ ಬೇವಿನಹಳ್ಳಿಯ ಸಿದ್ದಲಿಂಗೇಶ್ವರ ಪ್ರೌಢಶಾಲೆ ಸೇರಿದಂತೆ 17 ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳ ಸಾವಿರಾರು ವಿದ್ಯಾರ್ಥಿಗಳಿಗೆ ನೋಟ್ ಬುಕ್‌ಗಳನ್ನು ವಿತರಿಸಲಾಯಿತು.

ಸಂಸ್ಥೆಯ ಸಂಯೋಜಕ ಕಿರಣ್‌ಕುಮಾರ್ ಮಾತನಾಡಿ, ಹರಿಹರ ತಾಲ್ಲೂಕಿನ 56ಕ್ಕೂ ಹೆಚ್ಚು ಶಾಲೆಗಳ ಸಾವಿರಾರು ಮಕ್ಕಳಿಗೆ ಕಾರ್ಪೊರೇಟ್ ಸಂಸ್ಥೆಗಳ ಲಾಭಾಂಶದಲ್ಲಿ ನಲಿ-ಕಲಿ, ಶೌಚಾಲಯ, ಪೀಠೋಪಕರಣಗಳು, ವಿದ್ಯಾರ್ಥಿನಿಯರ ವಿಶ್ರಾಂತಿ ಕೊಠಡಿ, ಗಣಕ ಯಂತ್ರ, ಗ್ರಂಥಾಲಯ ಪುಸ್ತಕಗಳು, ನೋಟ್‌ಬುಕ್‌ಗಳನ್ನು ವಿತರಿಸಲಾಗಿದೆ ಎಂದರು.

ದೀಪ ತಾನು ಸುಟ್ಟು ಬೆಳಕು ನೀಡುತ್ತೆ, ಹಾಗೇ ಇಂದಿನ ವಿದ್ಯಾರ್ಥಿಗಳು ಶಾಲೆಗೆ ಗೈರಾಗದೇ ಕಷ್ಟದಿಂದ ಅಭ್ಯಾಸ ಮಾಡಿ ಭವಿಷ್ಯದ ಸಮಾಜಕ್ಕೆ ಬೆಳಕು ನೀಡುವಂತಾಗಬೇಕು ಎಂದು ಅವರು ಆಶಯ ವ್ಯಕ್ತಪಡಿಸಿದರು.

ಕಸಾಪ ಕಾರ್ಯದರ್ಶಿ ಸದಾನಂದ ಮಾತನಾಡಿ, ಸಂಸ್ಥೆಗಳಿಂದ ನೆರವು ಪಡೆದಿದ್ದನ್ನು ಮರೆಯದೇ ಸದುಪಯೋಗ ಮಾಡಿಕೊಳ್ಳಿ, ಮಕ್ಕಳು ಈ ವಿಷಯವನ್ನು ಸ್ನೇಹಿತರು ಮತ್ತು ಮನೆಯಲ್ಲಿ ಹಂಚಿಕೊಳ್ಳಬೇಕೆಂದರು.

ಸಂಸ್ಥೆಯ ಸುಧೀಂದ್ರ, ರೂಪಶ್ರೀ, ಸುಬ್ರಹ್ಮಣ್ಯ, ಪ್ರಭಾರ ಮುಖ್ಯ ಶಿಕ್ಷಕ ಬಿ.ಸುರೇಶ್, ಮಂಜಪ್ಪ ಬಿದರಿ, ನಾಗರಾಜ್, ಶೈಕ್ಷಣಿಕ ಸಲಹೆಗಾರ ಕೆ.ಪಿ.ಜಯ್ಯಪ್ಪ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆ, ಕಮಲಾಕ್ಷಪ್ಪ ಕಲ್ಲೇರ, ದೈಹಿಕ ಶಿಕ್ಷಕ ಕೆ.ಹೊನ್ನಪ್ಪ, ಚಂದ್ರಪ್ಪ, ಸುಧಾ ಮತ್ತಿತರೆ ಶಿಕ್ಷಕರು ಈ ವೇಳೆ ಇದ್ದರು


**ಜಾಗ ಮಾರಾಟಕ್ಕೆ**
ಲೋಕಿಕೆರೆ ರೋಡ್, ಇಂಡಸ್ಟ್ರೀಯಲ್ ಏರಿಯಾದಲ್ಲಿ ಜಾಗ ಮಾರಾಟಕ್ಕೆ ಇದೆ. ಇಂಡಸ್ಟ್ರೀಯಲ್ ಕನ್ವರ್ಷನ್ ಆಗಿದೆ. ಹೆಚ್ಚಿನ ಮಾಹಿತಿಗಾಗಿ ವಿಚಾರಿಸಿ :
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 40x60 North, 40x60 East, 40x60 West, 40x60 South, Rate - 2800 ರಿಂದ 3000 ರವರೆಗೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಸೈಟುಗಳು ಮಾರಾಟಕ್ಕಿವೆ**
ಬನಂಶಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೇಕಾಗಿದ್ದಾರೆ**
ಮನೆ ಕೆಲಸ ಮತ್ತು ಅಡುಗೆ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಸ್ಥಳ : ಕೆ.ಬಿ. ಬಡಾವಣೆ, ಕಾವೇರಮ್ಮ ಶಾಲೆ ಹಿಂಭಾಗ, ಕೆಲಸದ ಸಮಯ : ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ. ಆಸಕ್ತರು ಸಂಪರ್ಕಿಸಿ
ಮೊ. : 98442 94446

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್ 50X80ರ ಒಟ್ಟು (4) ಸೈಟ್, 40X60 ಉತ್ತರ, ಪೂರ್ವ, ಪಶ್ಚಿಮ, ದಕ್ಷಿಣ ಒಟ್ಟು (4) ಸೈಟ್, 30X50ರ 2 ಸೈಟ್, 30X40ರ 4 ಸೈಟ್, 20x30ರ 2 ಸೈಟ್
ಕಿರಣ್ ಬೂಸ್ನೂರ್ (ಏಜೆಂಟ್)
98440 63409,97315 63409

**ಸೈಟುಗಳು ಮಾರಾಟಕ್ಕಿವೆ**
1) ಅಥಣಿ ಕಾಲೇಜ್ ಹತ್ತಿರ 40x60 East 2) ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ 40 ಅಡಿ ರೋಡ್ ಇದೆ, ಪಾರ್ಕ್ ಇದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟಿವಿ ಸ್ಟ್ಯಾಂಡ್ ಮಾರಾಟಕ್ಕಿದೆ**
ಬಹು ಉಪಯೋಗಿ ಟಿವಿ ಸ್ಟ್ಯಾಂಡ್ 3 ಸ್ಟೆಪ್‌ಗಳಿರುವ ಪ್ಲೈವುಡ್, ಕಾರ್ನರ್ ಶೋಕೇಸ್ ಮಾರಾಟಕ್ಕಿದೆ. 1ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.
96114 06883, 94487 31058

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. ಬಿ ಬ್ಲಾಕ್ ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವಮುಖವಾಗಿ 47x60 ಅಡಿ ಅಳತೆ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
9742434049

**WANTED**
• Salesman
• ITI Fitter
attractive salary with PF and ESI
*Ambika Furniture,*
843, Ashoka Road, Davanagere-577002
88844 88092, 99167 93795

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
MBA ಕಾಲೇಜ್ ರೋಡಿಗೆ ಅಥವಾ ಅಥಣಿ ಕಾಲೇಜ್ ಹತ್ತಿರ 30x40 North 40 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಮಹಡಿ ಮನೆ ಬಾಡಿಗೆಗಿದೆ**
ಸಿಂಗಲ್ ಬೆಡ್ ರೂಂ #1945/75, ಕಲ್ಲೇಶ್ವರ ಕುಟೀರ, 19ನೇ ಕ್ರಾಸ್, ವಿದ್ಯಾನಗರ ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
97419 88998, 70197 35235

**ಹಿಂದೂ ವಧು-ವರರ ಅನ್ವೇಷಣಾ ಕೇಂದ್ರ**
ಎಲ್ಲಾ ಜಾತಿಯ ಮೊದಲನೇ ಮತ್ತು ಎರಡನೇ ಮದುವೆ ಆಗುವವರು ಸಂಪರ್ಕಿಸಿ :
86184 74929, 89047 54519

**ಮನೆ ಬಾಡಿಗೆಗೆ / ಲೀಸ್‌ಗಿದೆ**
#679 ಕಸ್ತೂರಬಾ ಬಡಾವಣೆ, 9ನೇ ರಸ್ತೆ, ದಾವಣಗೆರೆ. 1 BHK
(ಸಸ್ಯಹಾರಿಗಳಿಗೆ ಮಾತ್ರ)
94800 00417

**ಮಳಿಗೆ ಬಾಡಿಗೆಗೆ ಇದೆ**
20x40 ಅಳತೆಯ ಮಳಿಗೆ 8HP ಪವರ್ ಇದೆ ಹಾಗೂ ಮೊದಲನೇ ಮಹಡಿ 2 BHK ಆಫೀಸ್‌ಗೆ ಬಾಡಿಗೆಗೆ ಇದೆ. (ಆರಾಧ್ಯ ಪ್ರಿಂಟರ್ಸ್) ಅಶೋಕ ರಸ್ತೆ, ಭೀಮ ಲಾಡ್ಜ್ ಹಿಂಭಾಗ, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.
98440 44187

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಹರಿಹರ ನಗರದ ಹೃದಯಭಾಗದ ವಾಣಿಜ್ಯ ಪ್ರದೇಶವಾದ ದೇವಸ್ಥಾನ ರಸ್ತೆಯಲ್ಲಿ (ಪ್ರಭಾಕರ ಟೆಕ್ಸ್‌ಟೈಲ್ಸ್ ಎದುರುಗಡೆ) 18×80 ಅಡಿ ಅಳತೆಯ 3 ಮಹಡಿಯ (Ground + 2 Floor) ಮೆಟ್ಟಿಲುಗಳ ಜೊತೆಗೆ ಲಿಫ್ಟ್ ವ್ಯವಸ್ಥೆಯಿರುವ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ಆಸಕ್ತರು ವಿಚಾರಿಸಿ
98442 94446, 98443 24441

**1BHK HOUSE FOR LEASE**
Single bedroom house for lease in K.B. Extn. with Anti-skid bathroom tiles, Vitrified flooring & Good water facility.
70199 49119

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಬಿಲ್ಡಿಂಗ್ ಎಲೆಕ್ಟ್ರಿಕಲ್ ಪ್ಲಂಬಿಂಗ್ & ಸೆಕ್ಯೂರಿಟಿ ಸ್ವಲ್ಪ ಅನುಭವ ಇರುವ ಹುಡುಗ ಬೇಕಾಗಿದ್ದಾರೆ. ಸಂಬಳ 10.000/- ದಿಂದ 14,000/- ಊಟಕ್ಕೆ 2000 ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
97400 98047

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಶೋರೂಂನಲ್ಲಿ ಕೆಲಸ ಮಾಡಲು ಯುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ರೆಡ್ಡಿ ಬಿಲ್ಡಿಂಗ್ ಹತ್ತಿರ ಸಂಪರ್ಕಿಸಿ.
97436 36000, 81976 96774

**ERA GROUP CAMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification : SSLC to Degree
7000K to 9000K+ Incentives.
ಸ್ಥಳ : KR Market Davanagere.
95350 51589, 78670 75786

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟ್ ಡಿಸಿ ಆಫೀಸ್ ಹತ್ತಿರ, ಕರೂರು ರಸ್ತೆಗೆ ಹೊಂದಿಕೊಂಡಿರುವ ಸೈಟ್‌ಗಳು ಮಾರಾಟಕ್ಕಿವೆ.
(ಅಳತೆ 30x40, 30x50)
78925 68692

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಕೆಲಸಕ್ಕೆ ಲೇಡಿಸ್/ಜೆಂಟ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಕಮೀಷನ್ ಇದೆ.
97400 49205
63621 85401

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ.
(ರೂ. 1550/- ಚದುರ ಅಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
98452 36274

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ & ರೆಸ್ಟೋರೆಂಟ್, ಹರಿಹರ
● ರೆಸ್ಟೋರೆಂಟ್ ಮ್ಯಾನೇಜರ್
● ಕುಕ್ಸ್ ● ಹೆಲ್ಪರ್
● ಬಿಲ್ಲಿಂಗ್ ಕಂಪ್ಯೂಟರ್ಸ್
● ಸಪ್ಲೈಯರ್ಸ್ ● ಕ್ಯಾಪ್ಟನ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ
99726 98591
94490 37488

**SITE FOR SALE**
AVARAGERE NEW RING ROAD 20X30, 30X40
CONTACT :
70265 08405
86609 98651

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ, ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು.
70195 12416

**ಎಕ್ಸ್‌ಚೇಂಜ್ ಆಫರ್**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್, ಸೊಳ್ಳೆ ಮೆಷ್, ಸ್ಪಂಜ್ ಬೆಡ್ ಸಿಗುತ್ತದೆ. ವುಡ್ ಪಾಲೀಶ್ ಮಾಡಲಾಗುವುದು ಹಾಗೂ ರಿಪೇರಿ ಸಹ ಮಾಡುತ್ತೇವೆ.
79750 23609

**WANTED**
Receptionist Cum Telecaller for professional Gym. Good kannada & English knowledge willing to work on sunday also Salary 15,000 to 20,000 Part time also available
93536 26664

**ಶಿಕ್ಷಕಿಯರು ಬೇಕಾಗಿದ್ದಾರೆ**
1) ಬಿಎ., ಬಿ.ಇಡಿ - 02
2) ಬಿ.ಎಸ್ಸಿ., ಪಿಸಿಎಂ ಅಥವಾ ಬಿ.ಎಸ್ಸಿ. ಬಿ.ಇಡಿ - 02, 3) ಡಿ.ಇಡಿ. - 02
ಜ್ಞಾನದೀಪ ಪಬ್ಲಿಕ್ ಸ್ಕೂಲ್ ನಿಟುವಳ್ಳಿ, ದಾವಣಗೆರೆ, ಕಾರ್ಯದರ್ಶಿಗಳು
94496 79346, 89710 18943

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ತಾಜ್ ಪ್ಯಾಲೇಸ್ ಹತ್ತಿರ ಬೂದಿಹಾಳು ರಸ್ತೆ ಸೈಟುಗಳು ಮಾರಾಟಕ್ಕಿವೆ**
NA ಸೈಟುಗಳು
(15x40, 20x30, 30x40)
78925 68692

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**TUITIONS PCMB/CS**
5th Std to 10th Std
Science, Maths
ಸಮೃದ್ಧಿ ಅಕಾಡೆಮಿ
96202 62361

**FLAT FOR SALE**
2BHK, SQ.FT : 1325
Flat for Lease, 3 BHK,
SQFT : 1888
Vidyanagar, last city bus stop, AM Apartment, Nainika Prime Rose
89519 38228, 80502 22181

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ನಗರ ಸಮೀಪದ ಎಲ್ಲೋ ಬೆಲ್ಟ್ ಜೋನಿನಲ್ಲಿ 9 ಎಕರೆ ಪಾಮಾಯಿಲ್ ತೋಟ, ಬೇಕಾದವರು ಸಂಪರ್ಕಿಸಿ :
99863 61250

**ಸೈಟ್ ಮಾರಾಟಕ್ಕಿದೆ**
30x36 ದಕ್ಷಿಣ ಮುಖವುಳ್ಳ ಸೈಟ್ ಗ್ಲಾಸ್ ಹೌಸ್ ಹತ್ತಿರ, ಲೊಕೋಷನ್ ಚೆನ್ನಾಗಿದೆ.
99862 34416

**Fully Automatic**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000 /- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

# ದುರಸ್ತಿಯಾಗದ ಭದ್ರಾ ಜಲಾಶಯ ಅನುದಾನ ಬಿಡುಗಡೆಗೆ ಒತ್ತಾಯ

ದಾವಣಗೆರೆ, ಜು. 17- ರೈತರ ಜೀವನಾಡಿಯಾಗಿರುವ ಭದ್ರಾ ಜಲಾಶಯ ದುರಸ್ತಿಗೆ ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಒತ್ತಾಯಿಸಿದರು.



ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಆಡಳಿತ ನಡೆಸಿದ ಬಿಜೆಪಿ ಸರ್ಕಾರದ ಅಂದಿನ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು 2006-07 ರಲ್ಲಿ 900 ಕೋಟಿ ರೂ. ಅನುದಾನ ಬಿಡುಗಡೆ ಮಾಡುವ ಮೂಲಕ ಭದ್ರಾ ಜಲಾಶಯಕ್ಕೆ ಆಧುನಿಕ ಸ್ಪರ್ಶ ನೀಡಿದ್ದರು. ನಂತರ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಈವರೆಗೂ ದುರಸ್ತಿ ಬಗ್ಗೆ ಚಕಾರವೆತ್ತಿಲ್ಲ. ಜಂಗಲ್ ಕ್ಲೀನ್ ಮಾಡಿಸಿಲ್ಲ ಎಂದು ಆರೋಪಿಸಿದರು.

ಭದ್ರಾ ಜಲಾಶಯದಿಂದ ದಿನ ನಿತ್ಯ 4 ರಿಂದ 5 ಸಾವಿರ ಕ್ಯೂಸೆಕ್ಸ್ ನೀರು ಸೋರಿಕೆಯಾಗುತ್ತಿರುವ ಬಗ್ಗೆ ಮಾಹಿತಿ ಬಂದಾಗ, ನಾವು ಅಧಿಕಾರಿಗಳಿಗೆ ಕರೆ ಮಾಡಿ ಸರಿಪಡಿಸದಿದ್ದರೆ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದ್ದರಿಂದ ತೇಪೆ ಹಾಕುವ ಕೆಲಸ ಮಾತ್ರ ಮಾಡಿದ್ದಾರೆ. ಎಮರ್ಜೆನ್ಸಿ ಗೇಟ್‌ಗೆ ಬೆಡ್ ಕಾಂಕ್ರಿಟ್ ಹಾಕಿಲ್ಲ. ಆದ್ದರಿಂದ ಈಗಲೂ ಪ್ರತಿದಿನ 500 ರಿಂದ 600 ಕ್ಯೂಸೆಕ್ಸ್ ನೀರು ಸೋರಿಕೆಯಾಗುತ್ತಿದೆ ಎಂದರು.

ಅಧಿಕಾರಿಗಳು ಮಾತ್ರ ಕೇವಲ 200 ಕ್ಯೂಸೆಕ್ಸ್ ಲೀಕೇಜ್ ಆಗುತ್ತಿದೆ ಎಂದು ಸುಳ್ಳು ಹೇಳುತ್ತಿದ್ದಾರೆ. ರಾಜ್ಯ ಸರ್ಕಾರ ಈ ಕೂಡಲೇ 100 ರಿಂದ 150 ಕೋಟಿ ರೂ. ಬಿಡುಗಡೆ ಮಾಡಿ ಶಾಶ್ವತ ದುರಸ್ತಿಗೆ ಮುಂದಾಗಬೇಕೆಂದು ಆಗ್ರಹಿಸಿದರು.

ಬಿಜೆಪಿ ಯುವ ಮುಖಂಡ ಮಾಡಾಳು ಮಲ್ಲಿಕಾರ್ಜುನ್ ಮಾತನಾಡಿ, ಭದ್ರಾ ಅಧಿಕಾರಿಗಳ ಅರಾಜಕತೆಯಿಂದಾಗಿ ಇದುವರೆಗೂ ಒಂದು ಸಾವಿರ ಕೆರೆಗಳು ತುಂಬುವಷ್ಟು ನೀರು ಸೋರಿಕೆಯಾಗಿದೆ. ಇದಕ್ಕೆ ರಿವರ್ ಸ್ಲೀವ್ಸ್ ದುರಸ್ತಿಗೆ ಈ ಹಿಂದೆ 90 ಲಕ್ಷ ರೂ. ಕಾಮಗಾರಿ ಗುತ್ತಿಗೆ ಪಡೆದಿರುವವರು ತೇಪೆ ಹಾಕಿರುವುದೇ ಸೋರಿಕೆಗೆ ಕಾರಣವಾಗಿದೆ ಎಂದು ಕಿಡಿಕಾರಿದರು.

ಇದನ್ನು ಪರಿಶೀಲಿಸಿದ ಅಧಿಕಾರಿಗಳಿಗೆ ಜಲಾಶಯದಲ್ಲಿ ನೀರು ಬಂದು ಸೋರಿಕೆಯಾದಾಗಲೇ ಗೊತ್ತಾಗಿರುವುದು. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿ ಎಂದು ಹೇಳಿದರು.

## ಭದ್ರಾ ಮೇಲ್ದಂಡೆಗೆ ನೀರು ಹರಿಸುವುದು ಖಂಡನೀಯ

ತುಂಗಾದಿಂದ 22 ಹಾಗೂ ಭದ್ರಾದಲ್ಲಿ ಪೂರ್ಣ ಭರ್ತಿಯಾದಾಗ 6 ಟಿಎಂಸಿ ಸೇರಿ 28 ಟಿಎಂಸಿ ನೀರನ್ನು ಭದ್ರಾ ಮೇಲ್ದಂಡೆ ಯೋಜನೆಗೆ ಬಳಕೆ ಮಾಡಬೇಕೆಂಬ ನಿಯಮವಿದೆ. ಆದರೆ ಭದ್ರಾ ಜಲಾಶಯ ಭರ್ತಿಯಾಗದಿದ್ದರೂ ಎರಡು ಬಾರಿ ನೀರು ಹರಿಸುವುದು ಖಂಡನೀಯ. ಇದನ್ನು ನಿಲ್ಲಿಸದಿದ್ದರೆ ಹಂತ, ಹಂತವಾಗಿ ಹೋರಾಟ ಮಾಡಲಾಗುವುದು.

- ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವರು

## ಬಿಜೆಪಿ ಅಭ್ಯರ್ಥಿ ಸೋಲಿಗೆ ಸ್ವಯಂಕೃತ ಅಪರಾಧ ಕಾರಣ

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಗಾಯತ್ರಿ ಸಿದ್ದೇಶ್ವರರ ಸೋಲಿಗೆ ಅವರ ಸ್ವಯಂಕೃತ ಅಪರಾಧಗಳೇ ಕಾರಣ. ಈ ಕುರಿತು ನಮ್ಮ ಬಗ್ಗೆ ಹೀಯಾಳಿಸಿ ಮಾತನಾಡಿದರೆ ಸಹಿಸುವುದಿಲ್ಲ ಎಂದು ರೇಣುಕಾಚಾರ್ಯ ಗುಡುಗಿದರು.

ನಾವು ಅಭ್ಯರ್ಥಿ ಗೆಲುವಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಪಕ್ಷದ ಘಟಾನುಘಟಿಗಳಿರುವ ಹರಿಹರ, ಜಗಳೂರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಹಿನ್ನಡೆಯಾಗಿರುವ ಬಗ್ಗೆ ಏಕೆ ಮಾತನಾಡುತ್ತಿಲ್ಲ ಎಂದರು.

ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ಸರ್ಕಾರ ಕೂಡಲೇ ಐಸಿಐಸಿ ಸಭೆ ಕರೆದು ನೀರು ಬಿಡುಗಡೆಯ ವೇಳಾಪಟ್ಟಿ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಚಂದ್ರಶೇಖರ್ ಪೂಜಾರ್, ಬಿ.ಜಿ. ಅಜಯ್ ಕುಮಾರ್, ಪ್ರವೀಣ್ ಜಾಧವ್, ಧನಂಜಯ ಕಡ್ಲೇಬಾಳು, ಹಾಲೇಶನಾಯ್ಕ, ಹೆಚ್.ಬಿ.ಮಲ್ಲಿಕಾರ್ಜುನ್, ರಾಜು, ಸುಣಿಗೆರೆ ಕುಮಾರಪ್ಪ ಉಪಸ್ಥಿತರಿದ್ದರು.

# ದೇಶದ ಭವಿಷ್ಯ ಯುವ ವಿದ್ಯಾರ್ಥಿಗಳ ಮೇಲೆ ಅವಲಂಬಿತ

### ಭದ್ರಾ ಪದವಿ ಪೂರ್ವ ಕಾಲೇಜಿನ ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಅಭಿಮತ



ದಾವಣಗೆರೆ, ಜು. 16 - ದೇಶದ ಭವಿಷ್ಯ ವಿದ್ಯಾರ್ಥಿಗಳ ಮೇಲೆ ಅವಲಂಬಿತವಾಗಿದ್ದು, ಇಂದಿನ ಯುವಕರನ್ನು ನೈತಿಕ ಶಿಕ್ಷಣ, ಸಂಸ್ಕಾರ ಮತ್ತು ಸಂಸ್ಕೃತಿಯೊಡನೆ ಹೊಣೆಗಾರಿಕೆಯಿಂದ ರೂಪಿಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ. ಅದೇ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನು ಆಡಳಿತವಿದ್ದು, ನಾವೆಲ್ಲರೂ ಕಾನೂನನ್ನು ಪಾಲಿಸುವಲ್ಲಿ ಬದ್ಧರಾಗಿರಬೇಕು. ಸಂವಿಧಾನದ ಆಶಯಗಳಂತೆ ಸುಸ್ಥಿರ ಸಮಾಜ ನಿರ್ಮಾಣಕ್ಕೆ ಕಟಿಬದ್ಧರಾಗಬೇಕೆಂದು ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಕರೆ ನೀಡಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ನಿನ್ನೆ ನಡೆದ ಭದ್ರಾ ಪದವಿ ಕಾಲೇಜು ಹಾಗೂ ಭದ್ರಾ ಸ್ನಾತಕೋತ್ತರ ಕೇಂದ್ರದ ವಾರ್ಷಿಕೋತ್ಸವ ಹಾಗೂ 'ಸಾಂಸ್ಕೃತಿಕ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಬಸವಣ್ಣನವರು ಸಾಮಾಜಿಕ ನ್ಯಾಯದ ಸಮಾನತೆಯ ಚಳುವಳಿಯನ್ನು ಆರಂಭಿಸಿದ್ದರು. ಮಹಿಳೆಯರಿಗೆ ಮತ್ತು ಶೋಷಿತರಿಗೆ ಸಮಾನ ಅವಕಾಶವನ್ನು ನೀಡಿ ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಸಮಾನತೆಯ ಸಮಾಜದ ಕನಸನ್ನು ನನಸು ಮಾಡಿದರು. ಮಾನವ ಹಕ್ಕುಗಳನ್ನು ಪ್ರತಿಪಾದಿಸಿ ಮಾನವತೆಯ ಸಮಾಜದ ಕನಸನ್ನು ಬಸವಣ್ಣನವರು ಕಂಡಿದ್ದರು. 1948ರಲ್ಲಿ ಜಾರಿಗೆ ಬಂದ ಮಾನವ ಹಕ್ಕುಗಳು ಪ್ರಪಂಚದಲ್ಲಿ ಶಾಂತಿ ಮತ್ತು ಸೌಹಾರ್ದತೆಗೆ ಸಹಕಾರಿಯಾಗಿದ್ದು, ಮಾನವ ಹಕ್ಕುಗಳು ಜಾರಿಗೆ ಬಂದ ಮೇಲೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಜನಾಂಗೀಯ ಹೋರಾಟ, ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಭ್ರೂಣ ಹತ್ಯೆ ಅಂತಹ ಕ್ರೌರ್ಯಗಳನ್ನು ನಿಷೇಧಿಸಿ, ಜನಾಂಗಗಳ ಏಳಿಗೆಗೆ ನೆರವು ಮತ್ತು ಸಹಕಾರ ನೀಡುತ್ತಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಾಮಾಜಿಕ ಹೋರಾಟಗಾರ ಹಾಗೂ ಹಿರಿಯ ವಕೀಲ ಬಿ.ಎಂ. ಹನುಮಂತಪ್ಪ ಮಾತನಾಡಿ, ಆಧುನಿಕ ಯುವಕರಿಗೆ ಸರಳ ಜೀವನ ಅವಶ್ಯಕವಿದ್ದು, ದೈನಂದಿನ ಜೀವನದ ಕರ್ತವ್ಯಗಳನ್ನು ಅರಿತು ಬಾಳಬೇಕಾಗಿದೆ. ಶಿಕ್ಷಣ ಬದುಕನ್ನು ಹಸನ ಮಾಡುವಂತಿರಬೇಕು. ಇಂದಿನ ಸಮಾಜಕ್ಕೆ ಸಂವಿಧಾನದ ಜ್ಞಾನ ಬೇಕಾಗಿದ್ದು, ಅದರ ಮಹತ್ವವನ್ನು ಎಲ್ಲರು ಅರಿಯಬೇಕಾಗಿದೆ. ಭಾರತ ಸಂವಿಧಾನವು ಭಾರತೀಯರನ್ನು ಸಮಾನತೆಯಿಂದ ಕರೆದುಕೊಂಡು ಹೋಗುವ ಗ್ರಂಥವಾಗಿದೆ ಎಂದು ಹೇಳಿದರು. ಎಲ್ಲಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳಲ್ಲಿ ಆರೋಗ್ಯ ಮತ್ತು ಚಾರಿತ್ರ್ಯ ತುಂಬಾ ಅವಶ್ಯಕವೆಂದರು.

ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದ ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಅವರು, ವಿದ್ಯಾರ್ಥಿಗಳಲ್ಲಿ ಸೃಜನಶೀಲ ಮನೋಭಾವನೆ ಅತ್ಯಾವಶ್ಯಕವೆಂದು ಹೇಳುವುದರ ಮೂಲಕ ಬರಿ ಹಕ್ಕುಗಳಿಗೆ ಮಾತ್ರ ಮಹತ್ವ ಕೊಡದೆ, ಕರ್ತವ್ಯಗಳಿಗೂ ಮಹತ್ವ ನೀಡಬೇಕು. ಸಂಕುಚಿತ ಮನೋಭಾವನೆ ಬಿಟ್ಟು ವಿಶಾಲ ಮನೋಭಾವದ ಅಡಿಯಲ್ಲಿ ಹೋರಾಟದ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಭದ್ರಾ ಪದವಿ ಕಾಲೇಜು ಹಾಗೂ ಭದ್ರಾ ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲ ಪ್ರೊ. ಟಿ. ಮುರುಗೇಶ್ ಅವರು ಮಾತನಾಡಿ, ನಿಮ್ಮೊಳಗಿನ ಜ್ಞಾನ, ಕೌಶಲ್ಯ, ಅಭಿರುಚಿ, ಆಸಕ್ತಿಗಳು ನಿಮ್ಮ ಜೀವನದಲ್ಲಿ ಯಶಸ್ಸು ತಂದುಕೊಡುತ್ತವೆ. ಸಾಧನೆಯ ಹಾದಿಯಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆ ಇರಬೇಕು ಎಂದು ಹೇಳಿ ಸಾಧನೆ ಇಲ್ಲದೆ ಸತ್ತರೆ ಸಾವಿಗೂ ಅವಮಾನ ಎಂದರು.

ಭದ್ರಾ ಎಜುಕೇಷನ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಂ. ಸಂಕೇತ್, ಭದ್ರಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಿ. ಚಂದ್ರಪ್ಪ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಪೂರ್ಣಿಮಾ ಎಂ.ಕೆ ಮತ್ತು ಸುಮ ಎಂ.ವಿ ಅವರು ಪ್ರಮಾಣ ಪತ್ರಗಳ ವಿತರಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಉಪನ್ಯಾಸಕ ಸಿ. ಕೊಟ್ರೇಶ್ ಅವರು ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ವಿದ್ಯಾರ್ಥಿ ಕೆ.ಎನ್. ಪ್ರಜ್ವಲ್ ನಿರೂಪಿಸಿದರು. ಸಂಜಯ್ ಕುಮಾರ್ ಸ್ವಾಗತಿಸಿದರೆ, ಉಸ್ಮಾ ಫಾಲಕ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ರಂಜಿತಾ ವಂದಿಸಿದರು.

# ನಗರದಲ್ಲಿ ನಿವೃತ್ತ ನೌಕರರ ರಾಜ್ಯ ಮಟ್ಟದ ಸಭೆ ನಡೆಸಲು ತೀರ್ಮಾನ

ದಾವಣಗೆರೆ, ಜು.17- ನಗರದ ಮಹಾನಗರ ಪಾಲಿಕೆ ಆವರಣದಲ್ಲಿ ಡಿಸೆಂಬರ್‌ನಲ್ಲಿ ರಾಜ್ಯದ 10 ಮಹಾನಗರ ಪಾಲಿಕೆಯಲ್ಲಿ ಸೇವೆ ಸಲ್ಲಿಸಿದ ನಿವೃತ್ತರನ್ನು ಒಗ್ಗೂಡಿಸಿ 'ನಿವೃತ್ತ ನೌಕರರ ರಾಜ್ಯ ಮಟ್ಟದ ಸಭೆ' ನಡೆಸಲು ಪಾಲಿಕೆ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಸ್.ಎಚ್. ಗುರುಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಿದ್ದಾರೆ.

ದಿನಗೂಲಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ಕಡಿಮೆ ಪಿಂಚಣಿ ಪಡೆಯುತ್ತಿರುವ ನಿವೃತ್ತರಿಗೆ 2 ವರ್ಷದ ಅರ್ಹತಾದಾಯ ಬಡ್ತಿ ಕೊಡಿಸುವುದು ಸೇರಿ, ಇತರೆ ಬೇಡಿಕೆ ಬಗ್ಗೆ ಮುಕ್ತವಾಗಿ ಚರ್ಚಿಸೋಣ ಎಂದಿದ್ದಾರೆ. ಇದೇ ವೇಳೆ ಸಿ. ಕೃಷ್ಣಪ್ಪ ಅವರು ಖಜಾಂಚಿ ಸ್ಥಾನದ ಅಧಿಕಾರ ಸ್ವೀಕರಿಸಿದರು.

ಸಭೆಯಲ್ಲಿ ಉಪಾಧ್ಯಕ್ಷ ಪಿಸಾಳೆ ನಾಗರಾಜ್, ಪ್ರಧಾನ ಕಾರ್ಯದರ್ಶಿ ರುದ್ರಮುನೇಶ್ವರ, ಸಂಘದ ಜಂಟಿ ಕಾರ್ಯದರ್ಶಿ ಎಸ್.ಬಿ. ಗುತ್ಯಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಸೈಯ್ಯದ್ ಪೀರ್, ಹಿರಿಯ ನೌಕರ ಎಸ್.ಎಂ. ಬಸವರಾಜಪ್ಪ ಮತ್ತಿತರರಿದ್ದರು.

# ಕೂಡ್ಲಿಗಿಯ ಶಿಕ್ಷಕ ಸಂಗಮ್ ನಿವೃತ್ತಿ



ಕೂಡ್ಲಿಗಿ, ಜು. 17 - ತಾಲ್ಲೂಕಿನ ಸೂಲದಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಗಣಿತ ಶಿಕ್ಷಕರಾದ ಟಿ.ಜೆ. ಸಂಗಮ್ ಅವರು ಕಳೆದ ವಾರ ವಯೋನಿವೃತ್ತರಾಗಿದ್ದು, ಈ ಸಂದರ್ಭದಲ್ಲಿ ಟಿ.ಜೆ. ಸಂಗಮ್ ಹಾಗೂ ಶ್ರೀಮತಿ ಮಾದಕ್ಕ ಸಂಗಮ್ ಅವರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಮುಖ್ಯ ಗುರುಗಳಾದ ಡಿ. ಬೋರಯ್ಯ ವಹಿಸಿದ್ದರು. ಹಿರಿಯ ಶಿಕ್ಷಕರಾದ ಗೋವಿಂದಪ್ಪ, ಖಲೀಲ್ ಸಾಬ್, ಕೆ.ಹೆಚ್.ಎಂ. ವಿಶ್ವನಾಥ್, ಎನ್. ರವಿ, ಕೆ. ವಿಶ್ವನಾಥ, ಹರೀಶ ಗೌಡ, ಮಧು ಕೆ., ಶ್ರೀಮತಿ ವಿಜಯಲಕ್ಷ್ಮಿ, ಹಾಸ್ಟೆಲ್ ಬಸವರಾಜ, ಸಂತೋಷ, ಎಂ. ಬಸವರಾಜ, ಎಸ್. ಶಿಲ್ಪ, ಹಳೆಯ ವಿದ್ಯಾರ್ಥಿಗಳಾದ ಎಸ್. ಹನುಮಂತಪ್ಪ, ಹೆಚ್. ಕೃಷ್ಣ, ಭೀಮಪ್ಪ ಉಪಸ್ಥಿತರಿದ್ದರು.



# ಯುಪಿಎಸ್ಸಿ ಸಾಧಕಿ ಸೌಭಾಗ್ಯ ಶರಣಯ್ಯ ಸ್ವಾಮಿ ಬೀಳಗಿ ಮಠ ಅವರಿಗೆ ಸನ್ಮಾನ

ದಾವಣಗೆರೆ, ಜು. 17 - ದೆಹಲಿಯ ಸಂಕಲ್ಪ ಸಂಸ್ಥೆಯವರ ವತಿಯಿಂದ ಅಯೋಧ್ಯೆಯಲ್ಲಿ ನಡೆದ ಗುರು ಸನ್ಮಾನ ಕಾರ್ಯಕ್ರಮದಲ್ಲಿ ಯುಪಿಎಸ್ಸಿಯಲ್ಲಿ ಸಾಧನೆ ಮಾಡಿರುವ ದಾವಣಗೆರೆಯ ಸೌಭಾಗ್ಯ ಶರಣಯ್ಯ ಸ್ವಾಮಿ ಬೀಳಗಿಮಠ ಅವರಿಗೆ ಸನ್ಮಾನಿಸಲಾಯಿತು. ಕೇಂದ್ರ ಸಚಿವ ಹರ್ಷ ಮಲ್ಹೋತ್ರ ಅವರು ಸೌಭಾಗ್ಯ ಶರಣಯ್ಯ ಸ್ವಾಮಿ ಬೀಳಗಿಮಠ ಇವರನ್ನು ಸೇರಿದಂತೆ ದೇಶದ ವಿವಿಧ ಪ್ರತಿಭಾವಂತ ಯುಪಿಎಸ್ಸಿ ಸಾಧಕರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಡಾ. ಜಿ. ಪ್ರಸನ್ನಕುಮಾರ್, ದೆಹಲಿಯ ಉದ್ಯಮಿ ಅಭಿಷೇಕ್ ಗರ್ಗ್, ಪೋಷಕ ಶರಣಯ್ಯ ಸ್ವಾಮಿ, ಶರಣಮ್ಮ, ಸಹೋದರ ರೇಣುಕ ಪ್ರಸಾದ್, ರಾಜಶೇಖರ್ ಮಠದ್, ರಾಮ ಜನ್ಮಭೂಮಿ ಟ್ರಸ್ಟಿನ ಚಂಪಕ್ಕರಾಯ್, ಛತ್ತೀಸ್ ಘಡದ ಸಚಿವ ಯುಪಿ ಚೌದ್ರ, ಉತ್ತರ ಪ್ರದೇಶ ಸಚಿವ ಯೋಗೇಂದ್ರ ಉಪಾಧ್ಯ, ಉತ್ತರ ಪ್ರದೇಶ ಮಾಜಿ ಉಪಮುಖ್ಯಮಂತ್ರಿ ದಿನೇಶ್ ಶರ್ಮಾ ಇತರರು ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜು.17- ವಿಶ್ವ ಮಧ್ವ ಮಹಾಪರಿಷತ್ ವತಿಯಿಂದ 2023-24ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಶೇ.90 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ನಗರದ ಪಿ.ಜೆ ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪರಿಷತ್ ಶಾಖೆಯಲ್ಲಿ ಅರ್ಜಿ ಲಭ್ಯವಿದ್ದು, ಇದೇ ದಿನಾಂಕ 25 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ 9900153953, 9481865146 ಸಂಪರ್ಕಿಸಿ.

## ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು.17- ದುಮ್ಮಿ ಹುಸೇನ್ ಸಾಬ್ ಚಾರಿಟೇಬಲ್ ಮತ್ತು ಎಜುಕೇಶನಲ್ ಟ್ರಸ್ಟ್ ವತಿ ಯಿಂದ ಇದೇ ದಿನಾಂಕ 21ರ ಬೆಳಗ್ಗೆ 10.30ಕ್ಕೆ ನಗರದ ರೋಟರಿ ಬಾಲ ಭವನದಲ್ಲಿ ಎಸ್ಸೆಸ್ಸೆಲ್ಸಿ,ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ. ಟ್ರಸ್ಟಿನ ಅಧ್ಯಕ್ಷ ಡಾ.ಡಿ. ಅಬ್ದುಲ್ ಬುಡೇನ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪಾಲಿಕೆ ಸದಸ್ಯ ಕೆ. ಚಮನ್ ಸಾಬ್, ತಂಜೀಮುಲ್ ಮುಸ್ಲಿಮೀನ್ ಸಮಿತಿ ಅಧ್ಯಕ್ಷ ದಾದು ಸೇಠ್, ಸದಸ್ಯ ಸೈಯದ್ ಇಮ್ರಾನ್ ಪಾಲ್ಗೊಳ್ಳಲಿದ್ದಾರೆ.

# ಉತ್ತುಂಗ ಶಿಖರ ಏರಲು ಸಾಧನೆ ಬೇಕು

### ಎ.ಆರ್.ಜಿ ಕಾಲೇಜಿನ ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್



ದಾವಣಗೆರೆ,ಜು.17- ವಿದ್ಯಾರ್ಥಿಗಳು ಸರಿಯಾದ ನಿರ್ಧಾರ ತೆಗೆದುಕೊಂಡು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಸಾಧನೆಯ ಮನಸ್ಸಿದ್ದರೆ ಬದುಕಿನಲ್ಲಿ ಉತ್ತುಂಗ ಶಿಖರ ಏರಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ.ರಾಘವನ್ ತಿಳಿಸಿದರು.

ನಗರದ ಎ.ಆರ್.ಜಿ ಕಾಲೇಜಿನ 2023-24ನೇ ಸಾಲಿನ ಸಾಂಸ್ಕೃತಿಕ ವೇದಿಕೆ, ರಾಷ್ಟ್ರೀಯ ಸೇವಾ ಯೋಜನೆ, ಎನ್.ಸಿ.ಸಿ, ಕ್ರೀಡಾ ವಿಭಾಗ ಹಾಗೂ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ತಂದೆ-ತಾಯಿ, ಗುರುಗಳಿಗೆ ಗೌರವ ತರುವ ಸಾಧನೆ ಮಾಡಿ, ಯಾವುದೇ ರೀತಿಯ ಮಾದಕ ವಸ್ತುಗಳ ವ್ಯಸನದಿಂದ ದೂರವಿರಿ. ಆಕರ್ಷಣೆಗೆ ಒಳಗಾಗಬೇಡಿ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ ಸಿ.ಹೆಚ್. ಮುರುಗೇಂದ್ರಪ್ಪ ಅವರು ಮಾತನಾಡಿ, ವಿದ್ಯಾರ್ಥಿಗಳು ಹೋರಾಟದ ಮನೋಭಾವನೆ ಬೆಳೆಸಿಕೊಳ್ಳಿ, ಭವಿಷ್ಯದ ಬದುಕು ಉಜ್ವಲವಾಗಿರಲಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಬಿ.ಬೋರಯ್ಯ ಮಾತನಾಡಿ, ಪ್ರತಿಯೊಬ್ಬರಲ್ಲಿಯೂ ತಮ್ಮದೇ ಆದ ಪ್ರತಿಭೆಗಳಿವೆ. ಆ ಪ್ರತಿಭೆ ಹೊರಹೊಮ್ಮಿದಾಗ ಸಾಧನೆ ಮಾಡಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಅನಿತಾಕುಮಾರಿ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಡಾ. ಹೆಚ್. ಆರ್. ತಿಪ್ಪೇಸ್ವಾಮಿ, ಐಕ್ಯೂಎಸಿ ಸಂಚಾಲಕ ಪ್ರೊ. ರಶ್ಮಿ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ರಮೇಶ್ ಪೂಜಾರ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಆನಂದ್, ಗ್ರಂಥಾಲಯ ವಿಭಾಗದ ಮುಖ್ಯಸ್ಥ ಡಾ. ಚಮನ್ ಸಾಬ್, ಕಛೇರಿ ಅಧೀಕ್ಷಕ ಕರಿಬಸಪ್ಪ, ಉಪನ್ಯಾಸಕಿ ಕವಿತಾ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

# ಮೊಹರಂ: ಹರಿಹರದಲ್ಲಿ ಜ್ಯೂಸ್ ವಿತರಣೆ



ಹರಿಹರ, ಜು.17- ನಗರದಲ್ಲಿ ಮೊಹರಂ ಹಬ್ಬದ ಅಂಗವಾಗಿ ಗಾಂಧಿ ನಗರದ ನವ ಜವಾನ್ ಕಮಿಟಿ ವತಿಯಿಂದ ಸಾರ್ವಜನಿಕರಿಗೆ ಬಾದಾಮಿ ಮತ್ತು ವಿವಿಧ ಹಣ್ಣುಗಳಿಂದ ತಯಾರಿಸಿದ ಜ್ಯೂಸ್ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಾಧಿಕ್, ಸಲ್ಮಾನ್, ಶಾಹಿದ್, ರೋಹನ್, ಮುಬಾರಕ್, ಜುನೇದ್, ಯಾಕೂಬ್, ಶಾಲು ಇತರರು ಹಾಜರಿದ್ದರು.

# ಬಾರ್ ಸ್ಥಳಾಂತರಕ್ಕೆ ಒತ್ತಾಯಿಸಿ ನಾಳೆ ವಿನೋಬ ನಗರ ನಿವಾಸಿಗಳ ಪ್ರತಿಭಟನೆ

ದಾವಣಗೆರೆ, ಜು. 17- ವಿನೋಬನಗರ ನಾಲ್ಕನೇ ಮುಖ್ಯ ರಸ್ತೆಯಲ್ಲಿರುವ ಕೆ.ಎಸ್. ವೈನ್ ಲ್ಯಾಂಡ್ ಸ್ಥಳಾಂತರ ಮಾಡುವಂತೆ ಅನೇಕ ಬಾರಿ ಅಬಕಾರಿ ಇಲಾಖೆಯ ಗಮನಕ್ಕೆ ತಂದರೂ ಸಹ ಯಾವುದಕ್ಕೂ ಕಿವಿಗೊಡದೇ ನಿರ್ಲಕ್ಷ್ಯ ವಹಿಸಿದ್ದಾರೆ. ಕೂಡಲೇ ಬಾರ್ ಸ್ಥಳಾಂತರ ಮಾಡಬೇಕೆಂದು ಆಗ್ರಹಿಸಿ ನಾಡಿದ್ದು ದಿನಾಂಕ 19 ರಂದು ಬೆಳಿಗ್ಗೆ 11.30 ಕ್ಕೆ ಬಾರ್ ಮುಂಭಾಗದಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ವಿನೋಬನಗರ ನಿವಾಸಿ ಅನುಪಮ ರವಿಕುಮಾರ್ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮದ್ಯದ ಅಂಗಡಿಯು ವಿನೋಬನಗರ ನಾಲ್ಕನೇ ಮುಖ್ಯರಸ್ತೆಯ ಹೆಬ್ಬಾಗಿಲಿನಲ್ಲಿದ್ದು, ಈ ರಸ್ತೆಯಿಂದ ವಿನೋಬನಗರ, ಯಲ್ಲಮ್ಮ ನಗರ, ಶಾಂತಿನಗರಕ್ಕೆ ಹೋಗುವ ನಿವಾಸಿಗಳಿಗೆ ತುಂಬಾ ತೊಂದರೆಗಳಾಗುತ್ತಿವೆ ಎಂದರು.

ಮುಖ್ಯರಸ್ತೆ ಬಳಿ ಈ ಮದ್ಯದ ಅಂಗಡಿ ಇರುವ ಕಾರಣ. ಮದ್ಯ ಪ್ರಿಯರು ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುವುದು. ಪರಸ್ಪರ ಜಗಳ ಮಾಡುವುದರಿಂದ ಸಾರ್ವಜನಿಕರಿಗೆ ತುಂಬಾ ಕಿರಿಕಿರಿಯಾಗುತ್ತಿದೆ ಎಂದು ದೂರಿದರು.

ಬಾರ್ ಅಕ್ಕಪಕ್ಕದಲ್ಲೇ ಮೂತ್ರ ವಿಸರ್ಜನೆ ಮಾಡುವುದು. ವಾಂತಿ ಮಾಡುವುದರಿಂದ ಮನೆಯಲ್ಲಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗಿದೆ. ಹೆಣ್ಣು ಮಕ್ಕಳು ಮನೆ ಬಿಟ್ಟು ಹೊರ ಬರಲು ಮುಜುಗರ ಉಂಟಾಗುತ್ತದೆ ಎಂದು ಹೇಳಿದರು.

ಈ ಹಿಂದೆ ಮದ್ಯದಂಗಡಿ ಸ್ಥಳಾಂತರದ ಬಗ್ಗೆ ದೂರು ನೀಡಿದ್ದಾಗ ಅಂಗಡಿ ಮಾಲೀಕರು ಸ್ಥಳಾಂತರ ಮಾಡುವ ಬಗ್ಗೆ ಲಿಖಿತವಾಗಿ ಕೊಟ್ಟಿದ್ದರು. ಆದರೆ ಇದನ್ನು ಅಬಕಾರಿ ಇಲಾಖೆ ಪರಿಗಣಿಸದೇ ಅಂಗಡಿ ಪರವಾನಿಗೆ ನವೀಕರಣ ಮಾಡಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ನಿವಾಸಿಗಳಾದ ಭಾಗೀರಥಿ ಪಾಂಡುರಂಗ, ವಿಜಯಲಕ್ಷ್ಮಿ ನಿರಂಜನ್, ಸರೋಜ ವಿಜಯಕುಮಾರ್, ನಿವೇದಿತಾ ಸಚ್ಚಿನ್, ಸೈಯದ್ ಸೈಫುಲ್ಲಾ, ವಿಜಯಮ್ಮ ಶೀಲವಂತ್ ಉಪಸ್ಥಿತರಿದ್ದರು.

# ರಾಣೇಬೆನ್ನೂರಿನಲ್ಲಿ ನಾಳೆಯಿಂದ ಉಜ್ಜಯಿನಿ ಶ್ರೀಗಳ ಇಷ್ಟಲಿಂಗ ಪೂಜೆ




ರಾಣೇಬೆನ್ನೂರು, ಜು. 17- ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶೀ ಕೇಂದ್ರ ಸ್ವಾಮಿಗಳ ಆಷಾಢ ಮಾಸದ ಇಷ್ಟಲಿಂಗ ಪೂಜೆ ಜನಜಾಗೃತಿ ಸಮಾರಂಭ ರಾಣೇಬೆನ್ನೂರಿನ ಶ್ರೀ ಚನ್ನೇಶ್ವರ ಮಠದಲ್ಲಿ ಮೂರು ದಿನಗಳ ಕಾಲ ನಡೆಯಲಿದೆ.

ನಾಡಿದ್ದು ದಿನಾಂಕ 19 ರ ಶುಕ್ರವಾರ ಸಂಜೆ ಪೂರ್ಣಕುಂಭದೊಂದಿಗೆ ಸ್ವಾಗತ. ನಂತರ ಧರ್ಮಸಭೆ, ದಿನಾಂಕ 20 ರಂದು ಬೆಳಿಗ್ಗೆ ಇಷ್ಟಲಿಂಗ ಪೂಜೆ, ಸಂಜೆ ಧರ್ಮ ಸಭೆ, ದಿನಾಂಕ 21 ರಂದು ಬೆಳಿಗ್ಗೆ ಇಷ್ಟಲಿಂಗ ಪೂಜೆ ನಂತರ ಧರ್ಮಸಭೆ ನಡೆಯಲಿದೆ. ಮೂರು ದಿನಗಳ ಧರ್ಮಸಭೆ ನಂತರ ಅನ್ನ ಸಂತರ್ಪಣೆ ಇರುತ್ತದೆ.

ಹೊನ್ನಾಳಿ ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಶ್ರೀ, ಆವರಗೊಳ್ಳ ಓಂಕಾರ ಶ್ರೀ, ಶನೇಶ್ವರ ಮಠದ ಶಿವಯೋಗಿ ಶ್ರೀ, ನಗರದ ಗುರುಬಸವ ಸ್ವಾಮಿಗಳು, ದಿಂಡದಹಳ್ಳಿ ಪಶುಪತಿ ಸ್ವಾಮಿಗಳು, ಕೋಣಂದೂರು ಸಿದ್ದವೀರ ಸ್ವಾಮಿಗಳು, ನೆಗಳೂರ ಗುರುಶಾಂತೇಶ್ವರ ಸ್ವಾಮಿಗಳು, ಲಿಂಗದಹಳ್ಳಿ ವೀರಭದ್ರ ಸ್ವಾಮಿಗಳು, ಮಣಕೂರ ಮಲ್ಲಿಕಾರ್ಜುನ ಸ್ವಾಮಿಗಳು, ರಟ್ಟಿಹಳ್ಳಿ ಶಿವಲಿಂಗ ಸ್ವಾಮಿಗಳು ಪಾಲ್ಗೊಳ್ಳುವರು.

ಉಪ ಸಭಾಪತಿ ರುದ್ರಪ್ಪ ಲಮಾಣಿ, ಸಂಸದ ಬಸವರಾಜ ಬೊಮ್ಮಾಯಿ, ಶಾಸಕ ಪ್ರಕಾಶ ಕೋಳವಾಡ, ಮಾಜಿ ಶಾಸಕ ಅರುಣಕುಮಾರ್ ಪೂಜಾರಿ, ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ ಪೂಜಾರಿ ಹಾಗೂ ಇತರರು ಭಾವಹಿಸುವರು ಎಂದು ಪತ್ರಿಕಾಗೋಷ್ಠಿಯಲ್ಲಿ ಬಸವರಾಜ ಪಟ್ಟಣ ಶೆಟ್ಟಿ, ಶಂಭು ಷಡಾಕ್ಷರಿ ಮಠ, ಜೆ. ಎನ್. ಸುರಳಿಕೇರಿ ಮಠ ತಿಳಿಸಿದ್ದಾರೆ.

॥ ಶ್ರೀ ವಿಠ್ಠಲ ರುಕ್ಮಾಯಿ ಪ್ರಸನ್ನ ॥ ರಿ.ನಂ. 7

**ದಾವಣಗೆರೆ ಭಾವಸಾರ ಕ್ಷತ್ರಿಯ ದೈವ ಮಂಡಳಿ (ರಿ.)**

ಮಹಾರಾಜ ಪೇಟೆ, ದಾವಣಗೆರೆ - 1.

**ಸರ್ವ ಸದಸ್ಯರ ಮಹಾಸಭೆಯ ಆಹ್ವಾನ ಪತ್ರಿಕೆ**

ಭಾವಸಾರ ಕ್ಷತ್ರಿಯ ದೈವ ಮಂಡಳಿಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ(ಜನರಲ್ ಬಾಡಿ ಮೀಟಿಂಗ್)ಯನ್ನು ದಿನಾಂಕ 20-07-2024ನೇ ಶನಿವಾರ ಸಾಯಂಕಾಲ 5 ಗಂಟೆಗೆ ಕರೆಯಲಾಗಿದೆ.

ವಿಶೇಷ ಸೂಚನೆ : ಸಮಾಜದ ಸದಸ್ಯರಿಗೆ ಆಹ್ವಾನ ಪತ್ರಿಕೆ ತಲುಪದೇ ಇದ್ದಲ್ಲಿ ದಯಮಾಡಿ ಇದನ್ನೇ ಆಹ್ವಾನವೆಂದು ಭಾವಿಸಿ, ಸರ್ವ ಸದಸ್ಯರ ಸಭೆಗೆ ಆಗಮಿಸಬೇಕೆಂದು ಕೇಳಿಕೊಳ್ಳುತ್ತೇವೆ.



## ಹೆಸರು ಬದಲಾವಣೆ

**ಮಂಜೋಜೀ ರಾವ್ ಟಿ. ಆರ್.** ಬಿನ್ **ರಂಗೋಜಿರಾವ್. ಟಿ.** ಎ, ವಯಸ್ಸು 35 ವರ್ಷ, ವಾಸ: ಗುಡಮಘಟ್ಟ ರಸ್ತೆ, ತಡಸ ಗ್ರಾಮ, ಆಗರದಹಳ್ಳಿ ಪೋಸ್ಟ್, ಭದ್ರಾವತಿ ತಾ॥, ಶಿವಮೊಗ್ಗ ಜಿ॥ ಆದ ನಾನು ಈ ಕೆಳಕಂಡಂತೆ ಪ್ರಮಾಣ ಮಾಡಿ ಹೇಳುವುದೇನೆಂದರೆ:-

**ಜೀವನ ರಾವ್ ಆರ್. ಎಂ,** ವಯಸ್ಸು 5 ವರ್ಷ, ಇವನು ನನ್ನ ಮಗನಾಗಿರುತ್ತಾನೆ. ಇವನ ಹೆಸರನ್ನು ಜೀವನ ರಾವ್ ಆರ್. ಎಂ. ಎಂದು ನಾಮಕರಣ ಮಾಡಿರುತ್ತೇವೆ. ಆದರೆ ಅವನ ಹೆಸರು ನನಗೆ ಇಷ್ಟ ಇಲ್ಲದೇ ಇರುವುದರಿಂದ ಅವನ ಹೆಸರನ್ನು ನಾನು ಸ್ವ-ಇಚ್ಛೆಯಿಂದ ನನ್ನ ಕುಟುಂಬದ ಸಮ್ಮತಿಯ ಮೇರೆಗೆ **ಜೀವನ ರಾವ್ ಆರ್. ಎಂ,** ಎಂಬುದರ ಬದಲಿಗೆ **ವಿರಾಂಶ್ ರಾಜೀವ್ ಹಕ್ಕೇನರ್** (VIRANSH RAJIV HAKKENAR) ಎಂದು ಹೆಸರನ್ನು ಬದಲಾಯಿಸಿರುತ್ತೇವೆ. ಈ ದಿನ ದಾವಣಗೆರೆಯ ನೋಟರಿಯವರ ಸಮಕ್ಷಮ ನನ್ನ ಮಗನ ಹೆಸರನ್ನು ಜೀವನ ರಾವ್ ಆರ್. ಎಂ. ಎಂಬುದರ ಬದಲಿಗೆ **ವಿರಾಂಶ್ ರಾಜೀವ್ ಹಕ್ಕೇನರ್** (VIRANSH RAJIV HAKKENAR) ಎಂದು ಬದಲಾಯಿಸಿ ಕೊಂಡಿರುತ್ತೇವೆ. ಇನ್ನು ಮುಂದೆ ನನ್ನ ಮಗನ ಎಲ್ಲಾ ದಾಖಲಾತಿಗಳು, ವಿದ್ಯಾಭ್ಯಾಸ ಹಾಗೂ ಎಲ್ಲಾ ವ್ಯವಹಾರಗಳನ್ನು **ವಿರಾಂಶ್ ರಾಜೀವ್ ಹಕ್ಕೇನರ್** VIRANSH RAJIV HAKKENAR) ಎಂಬ ಹೆಸರಿನಲ್ಲಿ ವ್ಯವಹರಿಸುತ್ತೇವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಈ ಕೆಳಗಿರುವ ಸಹಿ ಮತ್ತು ಹೆಸರು ನನ್ನದು ಮತ್ತು ಮೇಲ್ಕಂಡ ಅಂಶಗಳು ನಿಜವಾದವು ಮತ್ತು ಸತ್ಯವಾದವುಗಳು ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

**ದಾವಣಗೆರೆ. ದಿನಾಂಕ : 15.7.2024** **ಪ್ರಮಾಣ ಕರ್ತ**


**ಜನ್ಮ ದಿನದ ಶುಭಾಶಯಗಳು**



ಇಂದು ತಮ್ಮ ಜನ್ಮದಿನದ ಸಂಭ್ರಮದಲ್ಲಿರುವ ಎ.ಪಿ.ಎಂ.ಸಿ. ವರ್ತಕರಾದ

**ಬಿ.ಎಸ್. ರಮೇಶ್**

ಇವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

ಕಂದಗಲ್ಲು ಗ್ರಾಮಸ್ಥರು, ಬಂಧುಗಳು ಹಾಗೂ ಸ್ನೇಹಬಳಗ, ದಾವಣಗೆರೆ.

# ನಗರದಲ್ಲಿ ಭಾವೈಕ್ಯತೆಯ ಮೊಹರಂ 'ಯಾದೇ ಹುಸೇನ್' ಆಚರಣೆ



ಜಿಲ್ಲಾದ್ಯಂತ ಬುಧವಾರ ಮೊಹರಂ ಹಬ್ಬವನ್ನು ಹಿಂದೂ, ಮುಸ್ಲಿಂ ಸಮಾಜದವರು ಒಂದಾಗಿ ಭಾವೈಕ್ಯತೆ ಹಾಗೂ ಶ್ರದ್ಧಾ-ಭಕ್ತಿಯೊಂದಿಗೆ ಆಚರಿಸಿದರು. ದಾವಣಗೆರೆ ಬಸವರಾಜ ಪೇಟೆಯಲ್ಲಿ ಮೊಹರಂ ಮೆರವಣಿಗೆ

ದಾವಣಗೆರೆ, ಜು.17- ಚಂದ್ರ ದರ್ಶನದಿಂದ ಪ್ರಾರಂಭವಾಗಿರುವ ಮುಸ್ಲಿಂ ಬಾಂಧವರ ಹೊಸ ವರ್ಷದ ಸಂಕೇತವಾಗಿರುವ ಮೊಹರಂ ಹಬ್ಬ 'ಯಾದೇ ಹುಸೇನ್' ಅನ್ನು ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಇಂದು ನಗರದಲ್ಲಿ ಶ್ರದ್ಧಾ-ಭಕ್ತಿಯಿಂದ ಆಚರಿಸಿದರು.



ಯುವಕರು ಹುಲಿ ಕೈ ಬರೆಯಿಸಿಕೊಳ್ಳುತ್ತಿರುವ ಚಿತ್ರ

ಮೊಹರಂ ಅಂಗವಾಗಿ ವಿವಿಧ ಪ್ರದೇಶಗಳಲ್ಲಿ ಕುರುಹೀನ ಮಾಡಿದ್ದ ಅಲಾಯಿ ದೇವರು (ಪಂಜಾಗಳು) 8ನೇ ದಿನ ಹಾಗೂ ಹತ್ತನೇ ದಿನವಾದ ಇಂದು ನಗರದ ರಾಜಬೀದಿಗಳಲ್ಲಿ ಮೆರವಣಿಗೆ ನಡೆಸಿದವು. ಇದೇ ಸಂದರ್ಭದಲ್ಲಿ ಹರಕೆ ಹೊತ್ತಿದ್ದ ಭಕ್ತಾದಿಗಳು, ಪಂಜಾಗಳಿಗೆ ನಿಂಬೆ ಹಣ್ಣಿನ ಸರ, ಕರಿಮೆಣಸು ಮಂಡಕ್ಕಿ, ಅರ್ಪಿಸಿ ಪುನೀತರಾದ ದೃಶ್ಯಗಳು ಅಲ್ಲಲ್ಲಿ ಕಂಡು ಬಂದವು.

ಸಾಯಂಕಾಲ ಹೊಂಡದ ವೃತ್ತ ಬಳಿ ಇರುವ ಹಜರತ್ ಸೈಯದ್ ರತನ್ ಷಾವಲಿ ಬಾಬಾರವರ ದರ್ಗಾ ಆವರಣದಲ್ಲಿ ಸಾಮೂಹಿಕವಾಗಿ ಸೇರಿಕೊಂಡು ಗಂಟುಗಳನ್ನು ಕಟ್ಟಿಕೊಂಡು ಶ್ಲೋಕಗಳನ್ನು ಓದುತ್ತಾ ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗಿ ಮೊಹರಂನ ಹತ್ತನೇ ದಿನಕ್ಕೆ ತೆರೆ ಎಳೆದರು.

ಯಾದೇ ಹುಸೇನ್ ಅಂಗವಾಗಿ ನಗರದ ಮಸೀದಿಗಳಲ್ಲಿ ಪ್ರಾರ್ಥನೆ ಯೊಂದಿಗೆ 'ಯೌಮೇ ಅಶುರಾ' ಪಠಿಸಲಾಯಿತು. ಫಾತೇ ಹಾಖಾನಿ ನಂತರ ಸಿಹಿ ಹಾಗೂ 'ಖಿಚಡಾ' ವಿನಿಯೋಗಿಸಲಾಯಿತು. ಜಿಲ್ಲಾದ್ಯಂತ ವಿವಿಧ ಸಂಘ - ಸಂಸ್ಥೆಗಳ ವತಿಯಿಂದ ಷರಬತ್ ಹಾಗೂ ಸಿಹಿ ಸಾರ್ವಜನಿಕರಿಗೆ ವಿತರಿಸಿದರು. ಭಾವೈಕ್ಯತೆಯ ಪ್ರತಿಬಿಂಬವಾಗಿರುವ ಮೊಹರಂ ಹಬ್ಬವು, ಗ್ರಾಮೀಣ ಪ್ರದೇಶದಲ್ಲಿ ಹಿಂದೂ - ಮುಸ್ಲಿಂ ಬಾಂಧವರು ಸೇರಿಕೊಂಡು ಆಚರಿಸಿದರು.

ಆಜಾದ್ ನಗರ, ಭಾಷಾನಗರ, ವಿನೋಬನಗರ, ಕೆಟಿಜೆ ನಗರ, ಜಾಲಿನಗರ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಯಾದೇ ಹುಸೇನ್ ಅಂಗವಾಗಿ ಕಳೆದ 10 ದಿನಗಳಿಂದ ತಕರೀರ್ (ಉಪನ್ಯಾಸ) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

**ನೂರಾನಿ ಆಟೋ ಸ್ಟಾಂಡ್ :** ಆಟೋ ಚಾಲಕರ ಸಂಘದ ವತಿಯಿಂದ ಕಳೆದ 51 ವರ್ಷಗಳಿಂದ ಆಚರಿಸುತ್ತಿರುವ 'ಜಶ್ನೇ ಯಾದೇ ಹುಸೇನ್' ತಖರೀರ್ ಇಂದು ಮುಕ್ತಾಯಗೊಳ್ಳಲಿದೆ ಎಂದು ವಿವರಿಸಿದ ಅಲ್ತಾಪ ಅಬ್ದುಲ್ ರಹಮಾನ್ ಇದೇ ಸಂದರ್ಭದಲ್ಲಿ ಪವಿತ್ರ ಹಜ್ ಯಾತ್ರೆ ಕೈಗೊಂಡು ತಾಯ್ನಾಡಿಗೆ ಮರಳಿದ ಹಜ್ ಯಾತ್ರಿಕರಿಗೆ ಸನ್ಮಾನಿಸಲಾಗುವುದು ಎಂದು ಹೇಳಿದರು.

## ಹರಿಹರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ವಿದ್ಯಾನಗರ ಎ ಬ್ಲಾಕ್, ಬಿ ಬ್ಲಾಕ್, ಸಿ ಬ್ಲಾಕ್, ಮಟ್ಟಿಬೀರಪ್ಪ ಕಣ, ಎಲ್.ಐ.ಸಿ ಆಫೀಸ್, ಶಿವಮೊಗ್ಗ ರಸ್ತೆ, ಇಂದಿರಾ ನಗರ, ಪ್ರಶಾಂತ್ ನಗರ, ಸರ್ಕಾರಿ ಆಸ್ಪತ್ರೆ, ಬೆಂಕಿನಗರ, ಜೆ.ಸಿ ಬಡಾವಣೆ, 1ನೇ ಮೇನ್‌ನಿಂದ 5ನೇ ಮೇನ್ ವರೆಗೂ, ಕಾಳಿದಾಸನಗರ, ಜ್ಯೋತಿರ್ ಮಠ, ರಾಮಮಂದಿರ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಅಭಿವೃದ್ಧಿಗೆ ಹಣವಿಲ್ಲ, ಅಧಿಕಾರಿಗಳ ನಿಯೋಜನೆಗೂ ಕಡಿವಾಣ : ಯುವ ಶಾಸಕರಿಂದ ತೀವ್ರ ಅಸಮಾಧಾನ

ಬೆಂಗಳೂರು, ಜು. 17 - ಅಭಿವೃದ್ಧಿಗೆ ಹಣವಿಲ್ಲ, ಕ್ಷೇತ್ರದಲ್ಲಿ ನಮಗೆ ಬೇಕಾದ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳುವ ಅಧಿಕಾರಕ್ಕೂ ಕಡಿವಾಣ ಹಾಕಿರುವ ಬಗ್ಗೆ ಯುವ ಶಾಸಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಿನ್ನೆ ರಾತ್ರಿ ನಗರದ ಖಾಸಗಿ ಪಂಚತಾರಾ ಹೋಟೆಲ್ ಒಂದರಲ್ಲಿ ಸೇರಿದ್ದ 40ಕ್ಕೂ ಹೆಚ್ಚು ಶಾಸಕರು, ಸರ್ಕಾರ ಹಾಗೂ ಸಚಿವರ ನಿರ್ಧಾರಗಳ ಬಗ್ಗೆ ತೀವ್ರ ಕಿಡಿಕಾರಿದ್ದಾರೆ.

ಒಂದೆಡೆ ನಮ್ಮ ಕ್ಷೇತ್ರಗಳಿಗೆ ಅಭಿವೃದ್ಧಿಗೆ ಹಣ ನೀಡುತ್ತಿಲ್ಲ, ಮತ್ತೊಂದೆಡೆ ನಮಗೆ ಬೇಕಾದ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳುವ ಅಧಿಕಾರವನ್ನೂ ಕಿತ್ತುಕೊಂಡರೆ ನಾವು ಏನು ಮಾಡಬೇಕು? ಎಂದು ಪ್ರಶ್ನಿಸಿದ್ದಾರೆ.

ಮಂಡ್ಯ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುವ ರವಿ ಗಾಣಿಗ ಅವರ ಮುಂದಾಳತ್ವದಲ್ಲಿ ಮಂಗಳವಾರ ರಾತ್ರಿ ನಡೆದ ಸಭೆಯಲ್ಲಿ ಯುವ ಶಾಸಕರೇ ಹೆಚ್ಚಾಗಿ ಭಾಗವಹಿಸಿದ್ದರು.

ಕಳೆದ ವರ್ಷ ಪ್ರಾರಂಭದಲ್ಲೂ ಇಂತಹ ಸಭೆ ಮಾಡಿದ್ದರಾದರೂ, ಅದು ಕೇವಲ ಒಂದು ಸ್ನೇಹಕೂಟಕ್ಕೆ ಸೀಮಿತವಾಗಿತ್ತು. ಆದರೆ ನಿನ್ನೆ ನಡೆದ ಸಭೆಯಲ್ಲಿ ಸರ್ಕಾರದ ನಿರ್ಧಾರಗಳ ಬಗ್ಗೆ ಮೆಲ್ಲಗೆ ಅಪಸ್ವರಗಳು ಕೇಳಿಬಂದಿದೆ.

ಮುಖ್ಯಮಂತ್ರಿಗಳ (ಶಾಸಕರ) ನಿಧಿಯಿಂದ ಕ್ಷೇತ್ರ ಅಭಿವೃದ್ಧಿಗೆ 25 ಕೋಟಿ ರೂ. ಬಿಡುಗಡೆ ಮಾಡುವುದಾಗಿ ಕಳೆದ ನಾಲ್ಕು ತಿಂಗಳ ಹಿಂದೆಯೇ ಸಿದ್ದರಾಮಯ್ಯ ತಿಳಿಸಿದ್ದರು.

ಇದುವರೆಗೂ ಆ ಹಣ ಬಿಡುಗಡೆಯಾಗಿಲ್ಲ, ಅಲ್ಲದೆ, ಬೇರೆ ಇಲಾಖೆಗಳ ಲೆಕ್ಕದ ಬಾಬ್ತಿನಡಿಯಲ್ಲೂ ಅಭಿವೃದ್ಧಿ ಕಾರ್ಯಕ್ಕೆ ಹಣ ಸಿಗುತ್ತಿಲ್ಲ.

ಬಡವರಿಗಾಗಿ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ತಂದರೂ, ಲೋಕಸಭಾ ಚುನಾವಣೆಯಲ್ಲಿ ಅದರ ಪೂರ್ಣ ಲಾಭ ನಮಗೆ ದಕ್ಕಿಲ್ಲ. ಕ್ಷೇತ್ರಗಳಲ್ಲಿ ರಸ್ತೆ ಗುಂಡಿಗಳನ್ನೂ ಮುಚ್ಚಲಾಗದೆ, ನಮ್ಮ ಸ್ಥಿತಿ ಚಿಂತಾಜನಕವಾಗಿದೆ, ಇದರ ನಡುವೆ ಕೆಳಹಂತದ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳುವ ಅವಕಾಶವೂ ತಪ್ಪುತ್ತಿದೆ.

**ಖಾಸಗಿ ಪಂಚತಾರಾ ಹೋಟೆಲ್‌ನಲ್ಲಿ 40ಕ್ಕೂ ಹೆಚ್ಚು ಶಾಸಕರಿಂದ ಸಭೆ**

**ಸರ್ಕಾರ ಹಾಗೂ ಸಚಿವರ ನಿರ್ಧಾರಗಳ ಬಗ್ಗೆ ತೀವ್ರ ಕಿಡಿ**


ಮತ ನೀಡಿದವರು ಅಭಿವೃದ್ಧಿ ಬಗ್ಗೆ ಪ್ರಶ್ನೆ ಮಾಡಿದರೆ, ಉತ್ತರಿಸುವ ಶಕ್ತಿ ಇಲ್ಲದಂತಾಗಿರುವುದಲ್ಲದೆ, ತಮ್ಮವರೊಬ್ಬರನ್ನು ಕ್ಷೇತ್ರದಲ್ಲಿ ಅಧಿಕಾರಿಯಾಗಿ ನಿಯೋಜಿಸುವಂತೆ ಮಾಡಿದ ಮನವಿಗೂ ಸ್ಪಂದನೆ ಇಲ್ಲವಾಗಿದೆ.

ವೈದ್ಯರು ಮತ್ತು ಶಿಕ್ಷಕರನ್ನು ಕೌನ್ಸಿಲಿಂಗ್ ಮೂಲಕ ನಿಯೋಜಿಸಲಾಗುತ್ತಿದೆ, ಇದೀಗ ಗ್ರಾಮೀಣಾಭಿವೃದ್ಧಿಯಡಿ ಬರುವ ಪಿಡಿಒಗಳು ಹಾಗೂ ಕಂದಾಯ ಇಲಾಖೆಯಡಿ ಬರುವ ನೋಂದಣಿ ಅಧಿಕಾರಿಗಳ ನಿಯೋಜನೆಗೂ ಇದೇ ಪದ್ಧತಿ ತರಲಾಗಿದೆ.

ಪೊಲೀಸ್ ವರ್ಗಾವಣೆಗೂ ಹೊಸ ಮಾರ್ಗಸೂಚಿ ಬಂದಿದೆ, ಇದರಿಂದ ನಾವು ನಮ್ಮ ಕ್ಷೇತ್ರದಲ್ಲಿ ಬೇಕಾದ 'ಸಿ' ಮತ್ತು 'ಡಿ' ದರ್ಜೆ ನೌಕರರನ್ನೂ ನಿಯೋಜಿಸಿಕೊಳ್ಳುವ ಅಧಿಕಾರ ಇಲ್ಲದಂತಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶಾಸಕರ ಕ್ರೀಡಾಕೂಟದ ನೆಪದಲ್ಲಿ ಸೇರಿದ್ದ ಸಭೆ ಕೊನೆ ಕೊನೆಯಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರುಗಳ ನಿರ್ಧಾರಗಳ ಬಗ್ಗೆ ಪರೋಕ್ಷ ಅಸಮಾಧಾನ ವ್ಯಕ್ತವಾಗಿದೆ.

ರವಿ ಗಾಣಿಗ ಅವರ ಮುಂದಾಳತ್ವದಲ್ಲಿ ಸಭೆ ನಡೆಯಿತಾದರೂ, ಹಳೇ ಮೈಸೂರು ಭಾಗದ ಹಿರಿಯ ಸಚಿವರೊಬ್ಬರು ತೆರೆಮರೆಯಲ್ಲಿ ಈ ಔತಣಕೂಟದ ಮುಂದಾಳತ್ವ ವಹಿಸಿದ್ದರು.



# 150 ಅಡಿ ದಾಟಿದ ಭದ್ರಾ ಜಲಾಶಯ





ಮಲೇಬೆನ್ನೂರು, ಜು.17- ಮಲೆನಾಡಿನಲ್ಲಿ ವ್ಯಾಪಕವಾಗಿ ಸುರಿಯುತ್ತಿರುವ ಪುನರ್ವಸು ಮಳೆಯಿಂದಾಗಿ ಭದ್ರಾ ನದಿಗಳಲ್ಲಿ ನೀರಿನ ಹರಿವು ಬುಧವಾರ ಮತ್ತಷ್ಟು ಹೆಚ್ಚಾಗಿದೆ.

ಭದ್ರಾ ಜಲಾಶಯಕ್ಕೆ ಮಂಗಳವಾರ 27,839 ಕ್ಯೂಸೆಕ್ಸ್ ಇದ್ದ ನೀರಿನ ಒಳಹರಿವು ಬುಧವಾರ ಬೆಳಗ್ಗೆ 35 ಸಾವಿರ ದಾಟಿದೆ. ಜಲಾಶಯದ ನೀರಿನ ಮಟ್ಟ 150 ಅಡಿ ದಾಟಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 9 ಅಡಿ ನೀರು ಹೆಚ್ಚಾಗಿದೆ. ಕಳೆದ ವರ್ಷ ಜಲಾಶಯದಲ್ಲಿ ಈ ದಿನ 141 ಅಡಿ ನೀರಿತ್ತು. ಭದ್ರಾ ಜಲಾಶಯದ ಒಳಹರಿವು ಹೆಚ್ಚಾಗಿರುವುದರಿಂದ ಮುಂದಿನ ವಾರ ಭದ್ರಾಕಾಡಾ ಸಭೆ ಕರೆದು ಮುಂಗಾರು ಹಂಗಾಮಿನ ಬೆಳೆ ಬೆಳೆಯಲು ನೀರು ಹರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆಂದು ಅಚ್ಚುಕಟ್ಟಿನ ರೈತರ ಒತ್ತಾಯವಾಗಿದೆ.

**ಮೈದುಂಬಿದ ತುಂಗಭದ್ರೆ, ಉಕ್ಕಡಗಾತ್ರಿ ಬಳಿ ಪ್ರವಾಹ ಭೀತಿ**

**ಮೈದುಂಬಿದ ತುಂಗಭದ್ರೆ, ಉಕ್ಕಡಗಾತ್ರಿ, ಆವರಿಸುತ್ತಿರುವ ಹಿನ್ನೀರು:** ಗಾಜನೂರಿನ ತುಂಗಾ ಜಲಾಶಯದಿಂದ ಅಪಾರ ಪ್ರಮಾಣದ ನೀರನ್ನು ನದಿಗೆ ಬಿಡುಗಡೆ ಮಾಡಿರುವುದರಿಂದ ಉಕ್ಕಡಗಾತ್ರಿ ಬಳಿ ತುಂಗಭದ್ರ ನದಿ ಮೈದುಂಬಿ ಹರಿಯುತ್ತಿದೆ. ನದಿ ಪಾತ್ರದಲ್ಲಿ ಪ್ರವಾಹದ ಭೀತಿ ಎದುರಾಗಿದೆ. ಬುಧವಾರ ನದಿಯಲ್ಲಿ ನೀರಿನ ಹರಿವು ಭಾರೀ ಪ್ರಮಾಣದಲ್ಲಿ ಹೆಚ್ಚಾಗಿರುವುದರಿಂದ ಉಕ್ಕಡಗಾತ್ರಿಯಲ್ಲಿ ಶ್ರೀ ಕರಿಬಸವೇಶ್ವರ ದೇವಸ್ಥಾನದ ಕೆಳಗಡೆ ನೀರು ನುಗ್ಗಿದ್ದು ಹಣ್ಣು ಕಾಯಿ ಅಂಗಡಿಗಳು ನೀರಿನಲ್ಲಿ ಮುಳುಗಿವೆ.

## ಜಗಳೂರು ತಾಲ್ಲೂಕು ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಅಜ್ಜಯ್ಯ



ಜಗಳೂರು, ಜು. 17 - ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭಾದ ನೂತನ ಅಧ್ಯಕ್ಷರಾಗಿ ಎನ್. ಸಿ. ಅಜ್ಜಯ್ಯ ನಾಡಿಗರ್ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಎಸ್. ಟಿ. ವಾಣಿ, ಎಂ.ಎಸ್. ರೇಖಾ, ಜಿ.ಎಸ್. ವೀಣಾ, ಕುಸುಮ, ಆರ್.ವಿ. ಆಶಾ, ಎಂ.ಆರ್. ಶೋಭಾ ಮತ್ತು ಕಾರ್ಯಕಾರಿ ಸಮಿತಿಯ ಸಾಮಾನ್ಯ ಸದಸ್ಯರಾಗಿ ವೈ.ಎನ್. ಮಂಜುನಾಥ್, ಎಂ.ಎನ್. ವೀರೇಂದ್ರ ಪಾಟೀಲ್, ಎಸ್.ಕೆ. ಮಂಜುನಾಥ್, ಜೆ.ಎಸ್. ಮಲ್ಲಿಕಾರ್ಜುನ್, ಜಿ.ಡಿ. ಪ್ರಕಾಶ್, ಕರಿಬಸವನಗೌಡ, ಎಂ.ಎಸ್. ಪಾಟೀಲ್, ಎನ್.ಎಸ್. ರಾಜು, ಎಸ್.ವಿ. ವೀರಭದ್ರಪ್ಪ, ಆರ್. ಬಸವರಾಜ, ಟಿ. ಬಸವರಾಜ್, ಎಮ್.ಎನ್. ಹಾಲಸ್ವಾಮಿ, ಪಿ.ಎಂ. ಶಿವಣ್ಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜಿ.ಎಸ್. ಸುಭಾಷ್ ಚಂದ್ರ ಬೋಸ್ ಚುನಾವಣಾಧಿಕಾರಿಯಾಗಿದ್ದರು.

## ಬಿಜೆಪಿ ಪ್ರಕೋಷ್ಠಕ್ಕೆ ಅಂಗಡಿ ನೇಮಕ



**ರಾಣೇಬೆನ್ನೂರು**

ರಾಣೇಬೆನ್ನೂರು, ಜು.17- ಬಿಜೆಪಿ ನಗರಾಡಳಿತ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯರನ್ನಾಗಿ ರಾಣೇಬೆನ್ನೂರು ನಗರಸಭೆ ಸದಸ್ಯ ಮಲ್ಲಿಕಾರ್ಜುನ ಅಂಗಡಿ ಅವರನ್ನು ಪ್ರಕೋಷ್ಠದ ರಾಜ್ಯ ಸಂಚಾಲಕ ಎಂ.ಕೆ ಗುಣಶೇಖರ ನೇಮಕ ಮಾಡಿದ್ದಾರೆ.

## ನಗರದಲ್ಲಿ ಇಂದು ಉಪನ್ಯಾಸ

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಇಂದು ಮಧ್ಯಾಹ್ನ 3.30 ಕ್ಕೆ ಕೇಂದ್ರದ ಸಭಾಂಗಣದಲ್ಲಿ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಡಿಯಲ್ಲಿ 'ಡೆಂಗ್ಯೂ ಜ್ವರ- ಮರೆತರೆ ಮಾರಣಾಂತಿಕವಾಗಬಹುದು. ಮುಂಜಾಗ್ರತೆಯಿರಲಿ' ವಿಷಯ ಕುರಿತು ಡಾ. ಎಂ.ಜಿ. ಉಷಾ ಮಾತನಾಡಲಿದ್ದಾರೆ.


**ಜನ್ಮ ದಿನದ ಶುಭಾಶಯಗಳು**



ಇಂದು ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ
ಕಾಂಗ್ರೆಸ್ ಯುವ ಮುಖಂಡರಾದ
**ಲಿಂಗರಾಜ್ ತೋಳಹುಣಸೆ**
ಇವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

ಶ್ರೀ ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು
ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರು, ದಾವಣಗೆರೆ
ಶ್ರೀ ಶಾಮನೂರು ಮಲ್ಲಿಕಾರ್ಜುನ್
ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ.
ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್, ಸಂಸದರು, ದಾವಣಗೆರೆ.
ಕುರುಡಿ ಗಿರೀಶ್ (ಸ್ವಾಮಿ) ಎಸ್.ಎಸ್. ಆಪ್ತ ಸಹಾಯಕರು, ದಾವಣಗೆರೆ.
ಶ್ರೀಕಾಂತ್ ಬಗರೆ, ಯುವ ಕಾಂಗ್ರೆಸ್ ಮುಖಂಡರು, ದಾವಣಗೆರೆ.
ಡಾ. ಕೆ.ಸಿ. ಶಿವಮೂರ್ತಿ, ಪ್ಲಾಸ್ಟಿಕ್ ಸರ್ಜರಿ, ಎಸ್‌ಎಸ್‌ಎಂಎಸ್, ದಾವಣಗೆರೆ.
ನಾಗರಾಜ್ ಮಳಲಕೆರೆ, ಶಶಿ ಸೋಪ್, ದಾವಣಗೆರೆ.
ಕೆ.ಸಿ. ಲಿಂಗರಾಜ್, ಆಕ್ಸ್‌ಫರ್ಡ್ ಸ್ಕೂಲ್, ಆನೆಕೊಂಡ.

ಕೀರ್ತಿ ಪ್ರಿಂಟರ್ಸ್‌ಸಲ್ಯೂಷನ್ಸ್ ಮತ್ತು ಸಿಬ್ಬಂದಿ ವರ್ಗ,
ಸ್ನೇಹಿತರ ಬಳಗ, ದಾವಣಗೆರೆ.







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas